A

# HIGH COURT OF KARNATAKA
## PRELIMINARY EXAMINATION FOR THE POST OF DISTRICT JUDGES

Time: 3.00 PM to 4.30 PM
ಸಮಯ: ಮಧ್ಯಾಹ್ನ 3.00 ರಿಂದ ಸಂಜೆ 4.30 ಗಂಟೆ

Marks – 100
ಅಂಕಗಳು – 100

Date: 30th June 2018
ದಿನಾಂಕ: 30ನೇ ಜೂನ್ 2018

**Note:**

***If there is any discrepancy in the question in English language and Kannada language, the questions as framed in English language shall prevail.***

*ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ*

********

1 Which of the following is correct statement of law in relation to a decree which is a nullity?
A) It can be challenged only by preferring an appeal.
B) It can be challenged only by way of revision under Section 115 of Code of Civil Procedure.
C) It can be challenged in execution and any collateral proceedings where its relevancy and effect is in issue.
D) It can be challenged only by filing a separate suit.

ಶೂನ್ಯ ಡಿಕ್ರಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಕಾನೂನಿನಡಿಯಲ್ಲಿ ಸರಿಯಾದ ಹೇಳಿಕೆ?
ಎ) ಮೇಲ್ಮನವಿ ಸಲ್ಲಿಸಿ ಮಾತ್ರ ಪ್ರಶ್ನಿಸಬಹುದು.
ಬಿ) ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 115ರ ಅಡಿಯಲ್ಲಿ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿ ಮಾತ್ರ ಪ್ರಶ್ನಿಸಬಹುದು.
ಸಿ) ಅಮಲ್ಜಾರಿ ಪ್ರಕ್ರಿಯೆಯಲ್ಲಿ ಅಥವಾ ಸದರಿ ಡಿಕ್ರಿಯ ಸುಸಂಬದ್ಧತೆ ಮತ್ತು ಪರಿಣಾಮ ಇನ್ನಾವುದೇ ಪಾರ್ಶ್ವಿಕ ನಡುವಳಿಕೆಯಲ್ಲಿ ಪ್ರಶ್ನೆಯಲ್ಲಿದ್ದಾಗ.
ಡಿ) ಪ್ರತ್ಯೇಕವಾದ ದಾವೆ ಸಲ್ಲಿಸಿ ಮಾತ್ರ ಪ್ರಶ್ನಿಸಬಹುದು.

2 Which of the following is not 'grievous hurt' as defined under Section 320 of the Indian Penal Code?
A) fracture or dislocation of a bone or tooth.
B) permanent privation of hearing of either ear.
C) permanent disfiguration of the head or face.
D) any hurt which causes the sufferer to be during the space of 15 days in severe bodily pain or unable to follow his ordinary pursuits.

ಭಾರತೀಯ ದಂಡ ಸಂಹಿತೆ ಕಲಂ 320ರ ಅಡಿಯಲ್ಲಿ ವ್ಯಾಖ್ಯಾನಿಸಿರುವ ಪ್ರಕಾರ ಕೆಳಕಂಡವುಗಳಲ್ಲಿ ಯಾವುದು ಭಾರಿ ದು:ಖಾಪಾತವಲ್ಲ?
ಎ) ಮೂಳೆ ಅಥವಾ ದಂತದ ಮುರಿತ ಅಥವಾ ಸ್ಥಳಾಂತರ.

ಬಿ) ಎರಡೂ ಕಿವಿಗಳ ಪೈಕಿ ಯಾವುದಾದರೊಂದರ ಶ್ರವಣ ಶಕ್ತಿಯನ್ನು ಶಾಶ್ವತವಾಗಿ ಕಳೆಯುವುದು.
ಸಿ) ತಲೆ ಅಥವಾ ಮುಖವನ್ನು ಶಾಶ್ವತ ರೀತಿಯಲ್ಲಿ ವಿರೂಪಗೊಳಿಸುವುದು.
ಡಿ) ಗಾಯಹೊಂದಿದ ವ್ಯಕ್ತಿ 15 ದಿನಗಳ ಪರ್ಯಂತ ತೀವ್ರವಾದ ದೈಹಿಕ ಯಾತನೆಯಲ್ಲಿರುವಂತೆ ಅಥವಾ ಆತನು ತನ್ನ ಸಾಮಾನ್ಯ ದೈನಂದಿನ ಕೆಲಸ ಕಾರ್ಯಗಳನ್ನು ಮಾಡದಂತೆ ಅಶಕ್ತಗೊಳಿಸುವ ನೋವು.

3 The imprisonment for default in payment of fine shall not exceed the following of the maximum fixed for substantive sentence-
A) 1/4.
B) 1/2.
C) 1/8.
D) None of the above.

ನ್ಯಾಯಾಲಯ ವಿಧಿಸಿದ ದಂಡ ಸಂದಾಯದಲ್ಲಿ ವಿಫಲವಾದ ವ್ಯಕ್ತಿಗೆ ವಿಧಿಸುವ ಸೆರೆಮನೆ ವಾಸವು ವಿಧಿಸಿರುವ ಮುಖ್ಯ ಶಿಕ್ಷೆಯ ಕೆಳಕಂಡ ಯಾವ ಭಾಗಾಂಶವನ್ನು ಮೀರಿರಬಾರದು–
ಎ) 1/4.
ಬಿ) 1/2.
ಸಿ) 1/8.
ಡಿ) ಮೇಲಿನ ಯಾವುದು ಅಲ್ಲ.

4 Section 32 of the Indian Divorce Act, 1869, provides for filing of petition for-
A) divorce.
B) maintenance.
C) restitution of Conjugal Rights.
D) permanent alimony.

ಭಾರತೀಯ ವಿಚ್ಛೇದನ ಅಧಿನಿಯಮ, 1869, ಕಲಂ 32 ಕಲ್ಪಿಸಿರುವ ಪರಿಹಾರ –
ಎ) ವಿಚ್ಛೇದನ.
ಬಿ) ಜೀವನಾಂಶ.
ಸಿ) ವೈವಾಹಿಕ ಹಕ್ಕು ಮರುಸ್ಥಾಪನೆ.
ಡಿ) ಶಾಶ್ವತ ಜೀವನಾಂಶ.

5 Which of the following is not a decree under Section 2(2) of the Code of Civil Procedure?
A) Order of rejection of plaint.
B) Order of dismissal for default.
C) Determination of question under Section 144 of the Code of Civil Procedure.
D) Preliminary decree.

ಈ ಕೆಳಗಿನವುಗಳ ಪೈಕಿ ಯಾವುದು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 2(2) ಅಡಿಯಲ್ಲಿ ಡಿಕ್ರಿ ಆಗುವುದಿಲ್ಲ?
ಎ) ವಾದ ಪತ್ರವನ್ನು ತಿರಸ್ಕರಿಸಿದ ಆದೇಶ.
ಬಿ) ಕರ್ತವ್ಯಲೋಪದಿಂದ ದಾವಾ ವಜಾಗೊಳ್ಳುವಿಕೆಯ ಆದೇಶ.
ಸಿ) ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 144ರ ಅಡಿಯಲ್ಲಿ ಎತ್ತಿದ ಪ್ರಶ್ನೆಯ ಮೇಲಿನ ನಿರ್ಣಯ.
ಡಿ) ಆರಂಭಿಕ ಡಿಕ್ರಿ.

6 Section 304-B of the Indian Penal Code prescribes punishment for-
A) dowry death.
B) murder.
C) abetment of suicide.
D) attempt to murder.

ಕೆಳಕಂಡ ಯಾವ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ 304–ಬಿ ರಡಿಯಲ್ಲಿ ಶಿಕ್ಷಾರ್ಹವಾಗಿದೆ–
ಎ) ವರದಕ್ಷಿಣೆಯ ಸಾವು.
ಬಿ) ಕೊಲೆ.
ಸಿ) ಆತ್ಮಹತ್ಯೆ ಪ್ರಚೋದನೆ.
ಡಿ) ಕೊಲೆಗೆ ಪ್ರಯತ್ನ.

7 Which amongst the following amounts to kidnapping under Section 361of the Indian Penal Code ?
A) kidnapping of male under 16 years only.
B) kidnapping of female under 18 years only.
C) person of unsound mind only.
D) all the above.

ಭಾರತೀಯ ದಂಡ ಸಂಹಿತೆ ಕಲಂ 361ರ ಅಡಿಯಲ್ಲಿ ಈ ಕೆಳಕಂಡ ಯಾವ ಕೃತ್ಯವು ಅಪಹರಣದ ಅಪರಾಧವಾಗುತ್ತದೆ?
ಎ) 16 ವರ್ಷ ಮೀರದ ಬಾಲಕನನ್ನು ಅಪಹರಿಸುವುದು ಮಾತ್ರ.
ಬಿ) 18 ವರ್ಷ ಮೀರದ ಬಾಲಕಿಯ ಅಪಹರಣ ಮಾತ್ರ.
ಸಿ) ಬುದ್ಧಿ ಮಾಂದ್ಯ ವ್ಯಕ್ತಿಯ ಅಪಹರಣ ಮಾತ್ರ.
ಡಿ) ಮೇಲಿನ ಎಲ್ಲವೂ.

8 In dealing with an unstamped or inadequately stamped documents in a judicial proceeding, which of the following is the correct statement of law under Sections 33 and 34 of the Karnataka Stamp Act?
A) can be admitted in evidence for a collateral purpose.
B) can be admitted in evidence if the opponent has no objection for admitting the same in evidence.
C) can be admitted only if the required duty or deficit duty, if any, and penalty are paid.
D) need not be impounded if the party who produces the document submits that he does not want it to be marked in evidence.

ಒಂದು ನ್ಯಾಯಿಕ ನಡವಳಿಕೆಯಲ್ಲಿ ಮುದ್ರಾಂಕ ರಹಿತ ಅಥವಾ ಕಡಿಮೆ ಮುದ್ರಾಂಕ ಹೊಂದಿರುವ ದಾಖಲೆಯ ಮೇಲೆ ಕ್ರಮ ಕೈಗೊಳ್ಳಲು ಕರ್ನಾಟಕ ಮುದ್ರಾಂಕ ಅಧಿನಿಯಮ ಕಲಂ 33 ಮತ್ತು 34ರ ಅಡಿಯಲ್ಲಿ ಕೆಳಕಂಡ ಯಾವುದು ಸರಿಯಾದ ಹೇಳಿಕೆ?
ಎ) ದಾಖಲೆಯನ್ನು ಪಾರ್ಶ್ವಿಕ ಉದ್ದೇಶಕ್ಕಾಗಿ ಮಾತ್ರ ಸಾಕ್ಷಿಯಲ್ಲಿ ಒಪ್ಪಿಕೊಳ್ಳಬಹುದು.
ಬಿ) ಎದುರುದಾರನಿಗೆ ತಕರಾರಿರದಿದ್ದರೆ ಸಾಕ್ಷದಲ್ಲಿ ಒಪ್ಪಿಕೊಳ್ಳಬಹುದು.
ಸಿ) ಸೂಕ್ತ ಮುದ್ರಾಂಕ ಅಥವಾ ಕೊರತೆಯ ಮುದ್ರಾಂಕ ಮತ್ತು ದಂಡವನ್ನು ಕಟ್ಟಿದಾಗ ಮಾತ್ರ ಸಾಕ್ಷಿಯಲ್ಲಿ ದಾಖಲಿಸಬಹುದು.

ಡಿ) ಹಾಜರು ಪಡಿಸಿದ ಕಕ್ಷಿದಾರನು ಸದರಿ ದಾಖಲೆಯನ್ನು ಗುರುತಿಸಿಕೊಳ್ಳುವುದಿಲ್ಲವೆಂದು ಹೇಳಿದರೆ ದಸ್ತಾವೇಜನ್ನು ಪರಿಬದ್ಧಗೊಳಿಸುವ ಅವಶ್ಯಕತೆ ಇಲ್ಲ.

9 In Mohammadan Law, Dower/Meher is a sum of money or other property received as consideration for marraige by-
A) husband from wife.
B) wife from husband.
C) father of the wife from husband.
D) father of the husband from wife.

ಮೊಹಮದೀಯ ಕಾನೂನಿನಡಿಯಲ್ಲಿ, ವಿವಾಹದ ಪ್ರತಿಫಲವಾಗಿ ಹಣ ಅಥವಾ ಸ್ವತ್ತಿನ ರೂಪದಲ್ಲಿ ಕೊಡುವ ಮೆಹರನ್ನು ಪಡೆಯಲು ಅರ್ಹರಾದವರು–
ಎ) ಪತ್ನಿಯಿಂದ ಪತಿ.
ಬಿ) ಪತಿಯಿಂದ ಪತ್ನಿ.
ಸಿ) ಪತ್ನಿಯ ತಂದೆ ಪತಿಯಿಂದ.
ಡಿ) ಪತಿಯ ತಂದೆ ಪತ್ನಿಯಿಂದ.

10 Which of the following is correct as per Section 97 of the Code of Civil Procedure in relation to a person aggrieved by the preliminary decree?
A) Can question its correctness during final decree proceedings.
B) Can dispute its correctness even in the appeal filed against the final decree.
C) Can dispute the correctness of the same in collateral proceedings also.
D) Unless he prefers an appeal against preliminary decree, he shall be precluded from disputing correctness of such preliminary decree, in an appeal filed against the final decree.

ಆರಂಭಿಕ ಡಿಕ್ರಿಯಿಂದ ಬಾಧಿತನಾದ ವ್ಯಕ್ತಿಯ ವಿಷಯದಲ್ಲಿ ಈ ಕೆಳಗಿನವುಗಳ ಪೈಕಿ ಯಾವುದು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 97ರ ಪ್ರಕಾರ ಸರಿಯಾದದ್ದು?
ಎ) ಅಂತಿಮ ಡಿಕ್ರಿ ವ್ಯವಹರಣೆಯಲ್ಲಿ ಅದರ ಸರಿತನವನ್ನು ಪ್ರಶ್ನಿಸಬಹುದು.
ಬಿ) ಅಂತಿಮ ಡಿಕ್ರಿಯ ವಿರುದ್ಧ ಮಾಡಿದ ಮೇಲ್ಮನವಿಯಲ್ಲಿ ಅದರ ಸರಿತನವನ್ನು ವಿವಾದಿಸಬಹುದು.
ಸಿ) ಅದರ ಸರಿತನವನ್ನು ಪಾರ್ಶ್ವಿಕ ವ್ಯವಹರಣೆಯಲ್ಲಿ ಸಹ ವಿವಾದಿಸಬಹುದು.
ಡಿ) ಆರಂಭಿಕ ಡಿಕ್ರಿಯ ವಿರುದ್ಧ ಅಪೀಲು ಮಾಡದೆ ಅಂತಿಮ ಡಿಕ್ರಿಯ ವಿರುದ್ಧ ಮಾಡಿದ ಮೇಲ್ಮನವಿಯಲ್ಲಿ ಆರಂಭಿಕ ಡಿಕ್ರಿಯ ಸರಿತನವನ್ನು ವಿವಾದಿಸತಕ್ಕದಲ್ಲ.

11 Article 371-J is inserted in the Constitution of India providing special provisions with respect to State of Karnataka, particularly for development of Hyderabad-Karnataka. Hyderabad-Karnataka includes the following districts as per the notification-
A) Bidar, Gulbarga, Koppal, Vijayapura, Yadgir and Bellary.
B) Gulbarga, Bidar, Yadgir, Koppal, Raichur and Bellary.
C) Gulbarga, Bidar, Koppal, Vijayapura, Bagalkot and Bellary.
D) Bidar, Koppal, Yadgir, Gulbarga, Bellary and Dharwad.

ಕರ್ನಾಟಕದ ಕುರಿತು ವಿಶೇಷವಾಗಿ ಹೈದರಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ಕರ್ನಾಟಕಕ್ಕಾಗಿ ವಿಶೇಷ ನಿಯಮಗಳನ್ನು ರಚಿಸುವುದಕ್ಕಾಗಿ ಸಂವಿಧಾನದಲ್ಲಿ 371–J ಅನುಚ್ಛೇದವನ್ನು ಅಳವಡಿಸಲಾಗಿದೆ. ಅಧಿಸೂಚನೆ ಅನ್ವಯ ಹೈದರಬಾದ್ ಕರ್ನಾಟಕವು ಈ ಕೆಳಕಂಡ ಜಿಲ್ಲೆಗಳನ್ನು ಒಳಗೊಂಡಿರುತ್ತದೆ–
ಎ) ಬೀದರ್, ಗುಲ್ಬರ್ಗ, ಕೊಪ್ಪಳ, ವಿಜಯಪುರ, ಯಾದಗಿರಿ ಮತ್ತು ಬಳ್ಳಾರಿ.
ಬಿ) ಗುಲ್ಬರ್ಗ, ಬೀದರ್, ಯಾದಗಿರಿ, ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ.
ಸಿ) ಗುಲ್ಬರ್ಗ, ಬೀದರ್, ಕೊಪ್ಪಳ, ವಿಜಯಪುರ, ಬಾಗಲಕೋಟೆ ಮತ್ತು ಬಳ್ಳಾರಿ.
ಡಿ) ಬೀದರ್, ಕೊಪ್ಪಳ, ಯಾದಗಿರಿ, ಗುಲ್ಬರ್ಗ, ಬಳ್ಳಾರಿ ಮತ್ತು ದಾರವಾಡ.

12 When a certificate is issued by the Deputy Commissioner under Section 32 of the Karnataka Stamp Act that the said document is duly stamped or not chargeable with a duty -
A) same may be acted upon only by the registering authority and may be registered.
B) it shall not only be receivable in evidence, but also may be acted upon by the registering authority and may be registered.
C) despite such a certificate, the Court may refuse to admit in evidence and the registering authority may refuse to act upon it and register.
D) the same may be admitted in evidence only for collateral purpose.

ಕರ್ನಾಟಕ ಮುದ್ರಾಂಕ ಅಧಿನಿಯಮ ಕಲಂ 32ರ ಅಡಿಯಲ್ಲಿ ಉಪ ಆಯುಕ್ತರು ಒಂದು ದಸ್ತಾವೇಜಿಗೆ ಸಮರ್ಪಕ ಮುದ್ರಾಂಕಿತಗೊಂಡಿದೆ ಅಥವಾ ಸದರಿ ದಸ್ತಾವೇಜಿಗೆ ಯಾವುದೇ ಮುದ್ರಾಂಕ ಸಲ್ಲಿಸಬೇಕಾಗಿಲ್ಲವೆಂದು ಪ್ರಮಾಣ ಪತ್ರ ನೀಡಿದಾಗ–
ಎ) ನೋಂದಣಿ ಪ್ರಾಧಿಕಾರ ಮಾತ್ರ ಸದರಿ ಪ್ರಮಾಣ ಪತ್ರವನ್ನು ಗಣನೆಗೆ ತೆಗೆದುಕೊಂಡು ದಸ್ತಾವೇಜನ್ನು ನೋಂದಾಯಿಸಬಹುದು.
ಬಿ) ಸದರಿ ದಸ್ತಾವೇಜನ್ನು ಸಾಕ್ಷಿಯಲ್ಲಿ ಸ್ವೀಕರಿಸುವುದಲ್ಲದೆ, ನೋಂದಣಿ ಪ್ರಾಧಿಕಾರವು ದಸ್ತಾವೇಜನ್ನು ಪರಿಗಣಿಸಿ ನೋಂದಾಯಿಸಬಹುದು.
ಸಿ) ಸದರಿ ಪ್ರಮಾಣ ಪತ್ರದ ಹೊರತಾಗಿಯೂ ನ್ಯಾಯಾಲಯವು ದಸ್ತಾವೇಜನ್ನು ಸಾಕ್ಷಿಯಲ್ಲಿ ಸ್ವೀಕರಿಸಲು ತಿರಸ್ಕರಿಸಬಹುದು ಮತ್ತು ನೋಂದಣಿ ಪ್ರಾಧಿಕಾರವು ಅದನ್ನು ಗಣನೆಗೆ ತೆಗೆದುಕೊಳ್ಳುವುದನ್ನು ಮತ್ತು ನೋಂದಾಯಿಸುವುದನ್ನು ತಿರಸ್ಕರಿಸಬಹುದು.
ಡಿ) ದಸ್ತಾವೇಜನ್ನು ಪಾರ್ಶ್ವಿಕ ಉದ್ದೇಶಕ್ಕಾಗಿ ಸಾಕ್ಷಿಯಲ್ಲಿ ಸ್ವೀಕರಿಸಬಹುದು.

13 Under Section 161 of the Code of Criminal Procedure, the statement of a witness is recorded by-
A) Metropolitan Magistrate.
B) Judicial Magistrate.
C) Investigating Police Officer.
D) None of the above.

ದಂಡ ಪ್ರಕ್ರಿಯಾ ಸಂಹಿತೆ ಕಲಂ 161ರ ಅಡಿಯಲ್ಲಿ ಹೇಳಿಕೆಯನ್ನು ಪಡೆದುಕೊಳ್ಳುವವರು –
ಎ) ಮಹಾನಗರ ದಂಡಾಧಿಕಾರಿ.
ಬಿ) ನ್ಯಾಯಿಕ ದಂಡಾಧಿಕಾರಿ.
ಸಿ) ತನಿಖೆ ನಡೆಸುತ್ತಿರುವ ಪೋಲೀಸ್ ಅಧಿಕಾರಿ.
ಡಿ) ಮೇಲ್ಕಂಡ ಯಾರೂ ಅಲ್ಲ.

14 Article 243T of the Constitution of India provides for reservation of seats for Scheduled Caste/Scheduled Tribe in-
A) Legislative Assembly of the State.
B) every Municipality.
C) employment of the State.
D) Parliament.

ಭಾರತ ಸಂವಿಧಾನದ 243ಟಿ ಅನುಚ್ಛೇಧವು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಈ ಕೆಳಕಂಡ ಯಾವುದರಲ್ಲಿ ಮೀಸಲಾತಿ ಕಲ್ಪಿಸುತ್ತದೆ?
ಎ) ರಾಜ್ಯ ವಿಧಾನಸಭೆ.
ಬಿ) ಪ್ರತಿಯೊಂದು ನಗರಸಭೆ.
ಸಿ) ಸರ್ಕಾರಿ ಸೇವೆಯಲ್ಲಿ.
ಡಿ) ಸಂಸತ್ತು.

15 Under Section 29 of the State Financial Corporation Act, 1951, the Finance Corporation could recover its dues by proceeding against mortgaged properties-
A) with the permission of the District Court.
B) without the intervention of the Court on its own.
C) approaching Debt Recovery Tribunal.
D) None of the above.

ಹಣಕಾಸು ಸಂಸ್ಥೆಯು ರಾಜ್ಯ ಹಣಕಾಸು ಅಧಿನಿಯಮ ಕಲಂ 29ರ ಅಡಿಯಲ್ಲಿ ಭೋಗ್ಯಕ್ಕೊಳಪಡಿಸಿದ ಸ್ವತ್ತುಗಳ ವಿರುದ್ಧ ಕ್ರಮ ಕೈಗೊಂಡು ಬಾಕಿ ವಸೂಲಿ ಮಾಡಲು ಕೆಳಕಂಡ ಯಾವ ಕ್ರಮವನ್ನು ಅನುಸರಿಸಬೇಕು-
ಎ) ಜಿಲ್ಲಾ ನ್ಯಾಯಾಲಯದ ಅನುಮತಿ ಪಡೆಯಬೇಕು.
ಬಿ) ನ್ಯಾಯಾಲಯದ ಮಧ್ಯ ಪ್ರವೇಶವಿಲ್ಲದೆ, ಸ್ವಯಂ ಕ್ರಮ ಕೈಗೊಳ್ಳುವುದು.
ಸಿ) ಸಾಲ ವಸೂಲಾತಿ ನ್ಯಾಯಾಧಿಕರಣದಲ್ಲಿ ಅರ್ಜಿ ಸಲ್ಲಿಸುವುದು.
ಡಿ) ಮೇಲಿನ ಯಾವುದು ಅಲ್ಲ.

16 As per Section 49 of the Registration Act, an unregistered document which requires registration under the Registration Act and Transfer of Property Act-
A) cannot be received in evidence for any purpose.
B) can be received in evidence if any collateral transaction is not required to be effected by a registered instrument.
C) can be received in evidence if the opponent has no objection.
D) can be marked as a court document.

ನೋಂದಣಿ ಅಧಿನಿಯಮ ಮತ್ತು ಸ್ವತ್ತು ವರ್ಗಾವಣೆ ಅಧಿನಿಯಮಗಳ ಅಡಿ ನೋಂದಣಿಯಾಗಲೇಬೇಕಾದ ದಸ್ತಾವೇಜು ನೋಂದಣಿಯಾಗದೆ ಇದ್ದ ಪಕ್ಷದಲ್ಲಿ ನೋಂದಣಿ ಅಧಿನಿಯಮ ಕಲಂ 49ರ ಅನ್ವಯ ಸದರಿ ದಸ್ತಾವೇಜನ್ನು-
ಎ) ಯಾವುದೇ ಉದ್ದೇಶಕ್ಕಾಗಿ ಸಾಕ್ಷದಲ್ಲಿ ಸ್ವೀಕರಿಸಲು ಸಾಧ್ಯವಿಲ್ಲ.
ಬಿ) ಯಾವುದೇ ಪಾರ್ಶ್ವಿಕ ವ್ಯವಹರಣೆಯು ನೋಂದಾಯಿತ ದಸ್ತಾವೇಜಿನ ಮೂಲಕ ಆಗಬೇಕಾಗಿರದಿದ್ದರೆ ದಸ್ತಾವೇಜನ್ನು ಸಾಕ್ಷದಲ್ಲಿ ಸ್ವೀಕರಿಸಬಹುದು.

ಸಿ) ಎದುರುದಾರನಿಗೆ ತಕರಾರಿಲ್ಲದಿದ್ದರೆ ಸಾಕ್ಷದಲ್ಲಿ ಸ್ವೀಕರಿಸಲು ಸಾಧ್ಯವಿದೆ.
ಡಿ) ನ್ಯಾಯಾಲಯದ ದಸ್ತಾವೇಜಾಗಿ ಗುರುತಿಸಿಕೊಳ್ಳಬಹುದು.

17 The ingredients of possession are -
A) Corpus possessionis and Animus posidendi.
B) Res nullius and Res gestae.
C) Adverse title and vested title.
D) None of the above.

ಸ್ವಾಧೀನವನ್ನು ಸೂಚಿಸುವ ಅಂಶಗಳು–
ಎ) ಕಾರ್ಪಸ್ ಪೊಸೆಸಿಯೋನಿಸ್ ಮತ್ತು ಅನಿಮಸ್ ಪೊಸಿಡೆಂಡಿ.
ಬಿ) ರೆಸ್ ನಲ್ಲೀಸ್ ಮತ್ತು ರೆಸ್‌ಜಸ್ಟಿಯಾ.
ಸಿ) ವ್ಯತಿರಿಕ್ತ ಒಡೆತನ ಮತ್ತು ನಿಹಿತ ಒಡೆತನ.
ಡಿ) ಮೇಲಿನ ಯಾವುದೂ ಅಲ್ಲ.

18 Parliament has exclusive power to make laws with respect to any of the matters enumerated in-
A) List-I of the 7th Schedule.
B) List-II the 7th Schedule.
C) List-III of the 7th Schedule.
D) None of the above.

ಕೆಳಗೆ ನಮೂದಿಸಲಾದ _____ ವಿಷಯಗಳಿಗೆ ಸಂಬಂಧಿಸಿದಂತೆ ಕಾನೂನು ರಚಿಸುವ ಸಂಪೂರ್ಣ ಅಧಿಕಾರ ಸಂಸತ್ತಿಗಿದೆ.
ಎ) 7ನೇ ಅನುಬಂಧದ ಲಿಸ್ಟ್–I.
ಬಿ) 7ನೇ ಅನುಬಂಧದ ಲಿಸ್ಟ್–II.
ಸಿ) 7ನೇ ಅನುಬಂಧದ ಲಿಸ್ಟ್–III.
ಡಿ) ಮೇಲಿನ ಯಾವುದು ಅಲ್ಲ.

19 Inherent power under Section 482 of the Code of Criminal Procedure is exercised by-
A) District Court.
B) High Court.
C) Supreme Court.
D) All the Courts.

ದಂಡ ಪ್ರಕ್ರಿಯಾ ಸಂಹಿತೆ ಕಲಂ 482ರ ಅಡಿಯಲ್ಲಿ ಅಂತರ್ಗತ ಅಧಿಕಾರವನ್ನು ಚಲಾಯಿಸುವ ನ್ಯಾಯಾಲಯವು–
ಎ) ಜಿಲ್ಲಾ ನ್ಯಾಯಾಲಯ.
ಬಿ) ಉಚ್ಚ ನ್ಯಾಯಾಲಯ.
ಸಿ) ಸರ್ವೋಚ್ಚ ನ್ಯಾಯಾಲಯ.
ಡಿ) ಎಲ್ಲಾ ನ್ಯಾಯಾಲಯಗಳು.

20 In a suit for declaration of title and possession of property, court fee payable under Section 24 of the Karnataka Court Fees and Suits Valuation Act shall be-

A) on the market value of the property.

B) on Rs.1,000/-.

C) on half the market value of the property.

D) on the market value of the property or Rs.1,000/-, whichever is higher.

ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ದಾವಾ ಮೌಲ್ಯ ಮಾಪನ ಅಧಿನಿಯಮ ಕಲಂ 24ರ ಅಡಿಯಲ್ಲಿ ಸ್ವತ್ತಿನ ಸ್ವಾಮ್ಯ ಘೋಷಣೆ ಮತ್ತು ಸ್ವಾಧೀನಕ್ಕಾಗಿ ಸಲ್ಲಿಸಿರುವ ದಾವೆಯಲ್ಲಿ ನ್ಯಾಯಾಲಯ ಶುಲ್ಕವನ್ನು ಈ ಕೆಳಕಂಡ ಯಾವುದರ ಪ್ರಕಾರ ಭರಿಸಬೇಕು

ಎ) ಸ್ವತ್ತಿನ ಮಾರುಕಟ್ಟೆಯ ಮೌಲ್ಯದ ಮೇಲೆ.

ಬಿ) ರೂ.1,000/– ಮೇಲೆ.

ಸಿ) ಸ್ವತ್ತಿನ ಮಾರುಕಟ್ಟೆಯ ಮೌಲ್ಯದ 1/2ದಷ್ಟು ಮೊತ್ತದ ಮೇಲೆ.

ಡಿ) ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ ರೂ.1000/–, ಅವುಗಳಲ್ಲಿ ಯಾವುದ ಗರಿಷ್ಠವೋ ಅದರ ಮೇಲೆ.

21 Under what provision of law one person may sue or defend on behalf of all, where there are numerous persons having the same interest in the suit?

A) Order I Rule 10 of the Code of Civil Procedure.

B) Order I Rule 8 of the Code of Civil Procedure.

C) Order I Rule 12 of the Code of Civil Procedure.

D) None of the above.

ಸಮಾನ ಹಿತಾಸಕ್ತಿಯುಳ್ಳ ಹಲವಾರು ವ್ಯಕ್ತಿಗಳ ಪರವಾಗಿ ಒಬ್ಬ ವ್ಯಕ್ತಿಯು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಅಥವಾ ಪ್ರತಿರಕ್ಷಿಸಲು ಕೆಳಗಿನ ಯಾವ ಕಾನೂನಿಡಿಯಲ್ಲಿ ಅವಕಾಶವಿದೆ?

ಎ) ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10.

ಬಿ) ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 8.

ಸಿ) ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 12.

ಡಿ) ಮೇಲ್ಕಂಡ ಯಾವುದು ಅಲ್ಲ.

22 In an appeal by the State under Section 377 of the Code of Criminal Procedure for enhancement of sentence, the accused-

A) may plead for acquittal or reduction of sentence.

B) may plead only for reduction of sentence.

C) may plead for acquittal only if court grants leave.

D) may plead for acquittal only where he is sentenced for imprisonment of three years and above.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 377ರ ಅಡಿಯಲ್ಲಿ ಶಿಕ್ಷೆಯನ್ನು ವರ್ಧಿಸಲು ಸರಕಾರ ಸಲ್ಲಿಸಿರುವ ಮೇಲ್ಮನವಿಯಲ್ಲಿ, ಆರೋಪಿಯು ____

ಎ) ತನ್ನನ್ನು ಬಿಡುಗಡೆ ಮಾಡಲು ಅಥವಾ ಶಿಕ್ಷೆಯನ್ನು ಕಡಿತಗೊಳಿಸಲು ಬೇಡಿಕೆ ಸಲ್ಲಿಸಬಹುದು.

ಬಿ) ಶಿಕ್ಷೆಯನ್ನು ಕಡಿತಗೊಳಿಸಲು ಮಾತ್ರ ಬೇಡಿಕೊಳ್ಳುವುದು.

ಸಿ) ನ್ಯಾಯಾಲಯ ಅನುಮತಿ ನೀಡಿದರೆ ಮಾತ್ರ ಬಿಡುಗಡೆಗಾಗಿ ಕೋರಿಕೊಳ್ಳಬಹುದು.
ಡಿ) ಮೂರು ವರ್ಷಗಳು ಮತ್ತು ಅದಕ್ಕಿಂತ ಗರಿಷ್ಠ ಜೈಲು ಶಿಕ್ಷೆ ನೀಡಿದಲ್ಲಿ ಮಾತ್ರ ಬಿಡುಗಡೆಗಾಗಿ ಕೋರಿಕೊಳ್ಳಬಹುದು.

23 Article 39-A of the Constitution of India provides for-
A) Equal pay for equal work.
B) Equality before law.
C) Equal justice and free legal aid
D) None of the above.

ಭಾರತ ಸಂವಿಧಾನದ 39–ಎ ಅನುಚ್ಛೇಧವು ಈ ಕೆಳಕಂಡ ಯಾವುದನ್ನು ಕಲ್ಪಿಸುತ್ತದೆ–
ಎ) ಸಮಾನ ಕೆಲಸಕ್ಕೆ ಸಮಾನ ವೇತನ.
ಬಿ) ಕಾನೂನಿನ ಎದುರಿನಲ್ಲಿ ಸಮಾನತೆ.
ಸಿ) ಸಮಾನ ನ್ಯಾಯ ಮತ್ತು ಉಚಿತ ಕಾನೂನು ನೆರವು.
ಡಿ) ಮೇಲಿನ ಯಾವುದು ಅಲ್ಲ.

24 A Will is a transfer of property under -
A) the Transfer of Property Act.
B) the Indian Succession Act.
C) the Hindu Succession Act.
D) None of the above.

ಮೃತ್ಯು ಪತ್ರವು ಸ್ವತ್ತಿನ ವರ್ಗಾವಣೆಯಾಗಿ ಪರಿಗಣಿಸಲ್ಪಡುವುದು–
ಎ) ಸ್ವತ್ತಿನ ವರ್ಗಾವಣೆ ಅಧಿನಿಯಮದ ಅನ್ವಯ.
ಬಿ) ಭಾರತ ಉತ್ತರಾಧಿಕಾರ ಅಧಿನಿಯಮದಡಿ.
ಸಿ) ಹಿಂದೂ ಉತ್ತರಾಧಿಕಾರ ಅಧಿನಿಯಮದಡಿ.
ಡಿ) ಮೇಲಿನ ಯಾವುದೂ ಅಲ್ಲ.

25 Commission of robbery by the following number of persons constitutes dacoity-
A) 3 only.
B) 2 only.
C) 4 only.
D) 5 or more than 5.

ಈ ಕೆಳಕಂಡ ಸಂಖ್ಯೆಯ ವ್ಯಕ್ತಿಗಳು ದೋಚಿದಾಗ ಆ ಕೃತ್ಯವು ಡಕಾಯಿತಿ ಅಪರಾಧವಾಗಿ ಪರಿಗಣಿಸಲ್ಪಡುತ್ತದೆ–
ಎ) 3 ಮಾತ್ರ.
ಬಿ) 2 ಮಾತ್ರ.
ಸಿ) 4 ಮಾತ್ರ.
ಡಿ) 5 ಅಥವಾ 5ಕ್ಕಿಂತ ಹೆಚ್ಚು.

26 Article 16 of the Constitution of India provides for-
A) Equality before law.
B) Equality of opportunity in matters of public employment.

C) Equality before Courts.
D) Equality before Government.

ಸಂವಿಧಾನದ ಅನುಚ್ಛೇಧ 16 ಈ ಕೆಳಗಿನವುಗಳಲ್ಲಿ ಯಾವುದನ್ನು ನೀಡುತ್ತದೆ–
ಎ) ಕಾನೂನಿನ ಎದುರಿನಲ್ಲಿ ಸಮಾನತೆ.
ಬಿ) ಸಾರ್ವಜನಿಕ ಸೇವೆಯಲ್ಲಿ ಸಮಾನ ಅವಕಾಶ.
ಸಿ) ನ್ಯಾಯಾಲಯದ ಎದುರು ಸಮಾನತೆ.
ಡಿ) ಸರ್ಕಾರದ ಎದುರು ಸಮಾನತೆ.

27 Right to Subrogation means-
A) Right of substitution.
B) Right available to creditor in a contract of guarantee.
C) Right to get declared as insolvent.
D) None of the above.

ಪ್ರತಿಸ್ಥಾಪನ ಹಕ್ಕು ಎಂದರೆ–
ಎ) ಬದಲಿಸುವ ಹಕ್ಕು.
ಬಿ) ಸಾಲಕೊಟ್ಟವನಿಗೆ ಬದ್ಧತೆ ಒಪ್ಪಂದದಲ್ಲಿ ಇರುವ ಹಕ್ಕು.
ಸಿ) ದಿವಾಳಿಯೆಂದು ಘೋಷಣೆ ಹೊಂದುವ ಹಕ್ಕು.
ಡಿ) ಮೇಲೆ ಹೇಳಿದ ಯಾವುದೂ ಅಲ್ಲ.

28 In a suit for bare injunction where the plaintiff does not allege that his title to the property is denied, court fee required to be paid on the plaint under Section 26 of the Karnataka Court Fees and Suits Valuation Act is-
A) on the market value of the property.
B) on the amount at which the relief sought is valued in the plaint or on Rs.1,000/- whichever is higher.
C) Rs.25/-.
D) on the market value of the property or on Rs.1,000/- whichever is higher.

ಶಾಶ್ವತ ನಿರ್ಭಂದಕಾಜ್ಞೆಯನ್ನು ಮಾತ್ರ ಕೋರಿ ದಾವೆ ಸಲ್ಲಿಸಿದ್ದು ವಾದಿಯು ತನ್ನ ಸ್ವತ್ತಿನ ಸ್ವಾಮ್ಯವನ್ನು ಅಲ್ಲಗಳೆದಿದ್ದಾರೆಂದು ವಾದ ಪತ್ರದಲ್ಲಿ ನಮೂದಿಸದೇ ಇದ್ದಲ್ಲಿ ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ದಾವಾ ಮೌಲ್ಯ ಮಾಪನ ಅಧಿನಿಯಮದ ಕಲಂ 26ರ ಅಡಿಯಲ್ಲಿ ಪಾವತಿಸಬೇಕಾಗಿರುವ ನ್ಯಾಯಾಲಯ ಶುಲ್ಕವು–
ಎ) ಸ್ವತ್ತಿನ ಮಾರುಕಟ್ಟೆಯ ಮೌಲ್ಯದ ಮೇಲೆ.
ಬಿ) ವಾದ ಪತ್ರದಲ್ಲಿ ನಮೂದಿಸಿರುವ ಪರಿಹಾರದ ಮೌಲ್ಯ ಅಥವಾ ರೂ.1000/– ಅವುಗಳಲ್ಲಿ ಯಾವುದು ಗರಿಷ್ಠವೋ ಅದರ ಮೇಲೆ.
ಸಿ) ರೂ.25/–.
ಡಿ) ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ ರೂ.1000/– ಅವುಗಳಲ್ಲಿ ಯಾವುದು ಗರಿಷ್ಠವೋ ಅದರ ಮೇಲೆ.

29 Doctrine of *Caveat Emptor* applies to -
A) Seller.
B) Buyer.

C) Middleman.
D) None of the above.

ಕೇವಿಯಟ್ ಎಮ್ಪ್ಟರ್ ಸಿದ್ಧಾಂತಕ್ಕೆ ಒಳಪಡುವವರು –
ಎ) ಮಾರುವವನು.
ಬಿ) ಕೊಳ್ಳುವವನು.
ಸಿ) ಮಧ್ಯವರ್ತಿ.
ಡಿ) ಮೇಲಿನ ಯಾವುದು ಅಲ್ಲ.

30 Who was the first Attorney General for India?
A) Motilal Nehru.
B) Fali Nariman.
C) M.C.Setalvad
D) K.Parasaran.

ಭಾರತದ ಪ್ರಥಮ ಅಟಾರ್ನಿ ಜನರಲ್ ಯಾರು?
ಎ) ಮೋತಿಲಾಲ್ ನೆಹರು.
ಬಿ) ಫಾಲಿ ನಾರಿಮನ್.
ಸಿ) ಎಂ.ಸಿ.ಸೆಟಲ್‌ವಾಡ್.
ಡಿ) ಕೆ.ಪರಾಶರನ್.

31 Exception to the principle that limitation bars a remedy, but does not extinguish a right is enshrined in-
A) Section 25 of the Limitation Act.
B) Article 64 in the Schedule to the Limitation Act.
C) Section 3 of the Limitation Act.
D) Section 27 of the Limitation Act.

ಕಾಲಮಿತಿಯು ಪರಿಹಾರವನ್ನು ನಿಷೇಧಿಸುತ್ತದೆ ಆದರೆ ಹಕ್ಕನ್ನು ರಹಿತಗೊಳಿಸುವುದಿಲ್ಲ ಎಂಬ ತತ್ವಕ್ಕೆ ಅಪವಾದವಿರುವುದು–
ಎ) ಕಾಲಮಿತಿ ಅಧಿನಿಯಮ ಕಲಂ 25ರಲ್ಲಿ.
ಬಿ) ಕಾಲಮಿತಿ ಅಧಿನಿಯಮ ಅನುಚ್ಛೇಧ 64ರಲ್ಲಿ.
ಸಿ) ಕಾಲಮಿತಿ ಅಧಿನಿಯಮ ಕಲಂ 3ರಲ್ಲಿ.
ಡಿ) ಕಾಲಮಿತಿ ಅಧಿನಿಯಮ ಕಲಂ 27ರಲ್ಲಿ.

32 Where property is transferred subject to a condition absolutely restraining transferee from parting or disposing his interest in the property-
A) condition is void except in the case of a lease where the condition is for the benefit of the lessor.
B) tranfer is void.
C) property is forfeited to the Governement if such condition is imposed.
D) none of the above.

ಒಂದು ಸ್ವತ್ತನ್ನು ವರ್ಗಾಯಿಸಿ ಅದನ್ನು ಪರಭಾರೆ ಮಾಡಕೂಡದೆಂಬ ಷರತ್ತನ್ನು ವರ್ಗಾಯಿಸಿಕೊಂಡವರ ಮೇಲೆ ವಿಧಿಸಿದಾಗ-
ಎ) ಗೇಣಿ ವ್ಯವಹರಣೆಯಲ್ಲಿ ಗೇಣಿ ಕೊಟ್ಟವನ ಅನುಕೂಲಕ್ಕಾಗಿ ವಿಧಿಸಿರುವ ಷರತ್ತನ್ನು ಹೊರತುಪಡಿಸಿ ಪರಭಾರೆಯನ್ನು ಸಂಪೂರ್ಣ ನಿಷೇಧಿಸಿ ವಿಧಿಸಿರುವ ಯಾವುದೇ ಷರತ್ತು ಶೂನ್ಯವಾಗುತ್ತದೆ.
ಬಿ) ವರ್ಗಾವಣೆ ಶೂನ್ಯವಾಗುತ್ತದೆ.
ಸಿ) ಅಂತಹ ಷರತ್ತಿನಿಂದ ಸ್ವತ್ತು ಸರ್ಕಾರಕ್ಕೆ ಮುಟ್ಟುಗೋಲಾಗುತ್ತದೆ.
ಡಿ) ಮೇಲಿನದಾವುದು ಸರಿಯಲ್ಲ.

33 Section 326-B inserted in the Indian Penal Code in the year 2013 prescribes the punishment for-
A) voluntarily causing grievous hurt by dangerous weapons or means.
B) voluntarily causing grievous hurt to extort property.
C) voluntarily throwing or attempting to throw acid.
D) voluntarily causing grievous hurt to deter a public servant from his duty.

ಭಾರತೀಯ ದಂಡ ಸಂಹಿತೆ ತಿದ್ದುಪಡಿ 2013 ಅಧಿನಿಯಮದಲ್ಲಿ ಸೇರ್ಪಡೆಗೊಂಡ ಕಲಂ 326–ಬಿ ಇದು ಶಿಕ್ಷಾರ್ಹಗೊಳಿಸಿದ ಕೃತ್ಯವೆಂದರೆ –
ಎ) ಅಪಾಯಕಾರಿ ಆಯುಧಗಳ ಅಥವಾ ಸಾಧನಗಳ ಮೂಲಕ ಇಚ್ಛಾಪೂರ್ವಕವಾಗಿ ಭಾರಿ ದುಃಖಾಪಾತಗೊಳಿಸುವುದು.
ಬಿ) ಸ್ವತ್ತಿನ ಸುಲಿಗೆಗಾಗಿ ಇಚ್ಛಾಪೂರ್ವಕವಾಗಿ ಭಾರಿ ದುಃಖಾಪಾತಗೊಳಿಸುವುದು.
ಸಿ) ಇಚ್ಛಾಪೂರ್ವಕವಾಗಿ ಆಮ್ಲ ಎರಚುವುದು ಅಥವಾ ಎರಚಲು ಪ್ರಯತ್ನಿಸುವುದು.
ಡಿ) ಸಾರ್ವಜನಿಕ ಸೇವಕನಿಗೆ ಆತನ ಕರ್ತವ್ಯ ನಿರ್ವಹಣೆಯನ್ನು ತಡೆಯುವುದಕ್ಕಾಗಿ ಇಚ್ಛಾಪೂರ್ವಕವಾಗಿ ಭಾರಿ ದುಃಖಾಪಾತಗೊಳಿಸುವುದು.

34 First High Court of India was established at-
A) Bombay.
B) Calcutta.
C) Madras.
D) Delhi.

ಭಾರತದ ಪ್ರಥಮ ಉಚ್ಚನ್ಯಾಯಾಲಯವು ಸ್ಥಾಪನೆಯಾದ ಸ್ಥಳ-
ಎ) ಬಾಂಬೆ.
ಬಿ) ಕಲ್ಕತ್ತಾ.
ಸಿ) ಮದ್ರಾಸ್.
ಡಿ) ದೆಹಲಿ.

35 The Writ of Mandamus can be issued-
A) against the legislature for making law.
B) for performance of a public duty.
C) for deciding legality of an arrest.
D) for enforcing Fundamental Duties.

ಮ್ಯಾಂಡಮಸ್ ರಿಟ್‌ನ್ನು ಈ ಕೆಳಕಂಡವರ ವಿರುದ್ಧ ನೀಡಬಹುದಾಗಿದೆ —
ಎ) ಕಾನೂನು ರೂಪಿಸಲು ಶಾಸಕಾಂಗದ ವಿರುದ್ಧ.

ಬಿ) ಸಾರ್ವಜನಿಕ ಕರ್ತವ್ಯವನ್ನು ನೆರವೇರಿಸಲು.
ಸಿ) ಬಂಧನದ ಕಾನೂನು ಬದ್ಧತೆಯನ್ನು ನಿರ್ಧರಿಸಲು.
ಡಿ) ಮೂಲಭೂತ ಕರ್ತವ್ಯಗಳನ್ನು ಜಾರಿಗೊಳಿಸಲು.

36 In an interpleader suit-
A) plaintiff has interest in the subject matter.
B) plaintiff claims no interest in the subject matter.
C) suit must be for recovery of money only.
D) none of the above.

ಅಂತರ್ವಾದ ದಾವೆಯಲ್ಲಿ–
ಎ) ವಾದಿಗೆ ದಾವೆಯ ವಸ್ತುವಿನ ಮೇಲೆ ಆಸಕ್ತಿ ಇರುತ್ತದೆ.
ಬಿ) ವಾದಿಗೆ ದಾವೆಯ ವಸ್ತುವಿನ ಮೇಲೆ ಆಸಕ್ತಿ ಇರುವುದಿಲ್ಲ.
ಸಿ) ಹಣ ವಸೂಲಾತಿ ದಾವೆಗೆ ಮಾತ್ರ ಸಲ್ಲುತ್ತದೆ.
ಡಿ) ಮೇಲಿನ ಯಾವುದು ಅಲ್ಲ.

37 Gift may be revoked -
A) before the use of the property by the donee.
B) before the death of the donee.
C) before acceptance by the donee.
D) within 30 days of execution.

ದಾನವನ್ನು ಹಿಂದಕ್ಕೆ ಪಡೆಯಬಹುದಾದ ಸಂದರ್ಭ —
ಎ) ಸ್ವತ್ತನ್ನು ದಾನಪಡೆದವನು ಉಪಯೋಗಿಸುವ ಮುಂಚೆ.
ಬಿ) ದಾನ ಪಡೆದವನು ಸಾಯುವ ಮುಂಚೆ.
ಸಿ) ದಾನ ಪಡೆದವನು ದಾನವನ್ನು ಒಪ್ಪುವ ಮುಂಚೆ.
ಡಿ) ದಾನ ಮಾಡಿದ 30 ದಿನಗಳೊಳಗೆ.

38 A Commissioner appointed by the court under Order XXVI of the Code of Civil Procedure for recording evidence cannot-
A) permit cross-examination.
B) permit re-examination.
C) decide the objection raised by the other side.
D) permit marking of documents.

ಸಾಕ್ಷ್ಯವನ್ನು ದಾಖಲಿಸಿಕೊಳ್ಳಲು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26ರ ಅನ್ವಯ ನೇಮಕಗೊಂಡ ಆಯುಕ್ತರಿಗೆ ಕೆಳಕಂಡ ಯಾವುದನ್ನು ಮಾಡಲಾಗುವುದಿಲ್ಲ–
ಎ) ಪಾಟೀಸವಾಲನ್ನು ಅನುಮತಿಸುವುದು.
ಬಿ) ಮರು ವಿಚಾರಣೆಯನ್ನು ಅನುಮತಿಸುವುದು.
ಸಿ) ಎರಡೂ ಪಕ್ಷದವರು ಎತ್ತಿದ ತಕರಾರಿನ ಕುರಿತು ತೀರ್ಮಾನ ತೆಗೆದುಕೊಳ್ಳುವುದು.
ಡಿ) ದಸ್ತಾವೇಜನ್ನು ಗುರುತಿಸಲು ಅನುಮತಿಸುವುದು.

39 Delay in filing a suit-
A) can be condoned if delay is marginal and satisfactorily explained.
B) can be condoned only in suits for partition.

C) cannot be condoned at all.
D) can be condoned if defendant concedes for condonation.

ದಾವೆಯನ್ನು ಸಲ್ಲಿಸುವಲ್ಲಿ ಆದ ವಿಳಂಬವನ್ನು-
ಎ) ವಿಳಂಬವು ಅಲ್ಪ ಪ್ರಮಾಣದಲ್ಲಿದ್ದು ತೃಪ್ತಿಕರವಾಗಿ ವಿವರಿಸಿದ್ದರೆ ಮನ್ನಾ ಮಾಡಬಹುದು.
ಬಿ) ಆಸ್ತಿ ವಿಭಾಗ ದಾವೆಗಳಲ್ಲಿ ಮಾತ್ರ ಮನ್ನಾ ಮಾಡಬಹುದು.
ಸಿ) ಮನ್ನಾ ಮಾಡಲು ಸಾಧ್ಯವೇ ಇಲ್ಲ.
ಡಿ) ಪ್ರತಿವಾದಿಯು ಒಪ್ಪಿದಲ್ಲಿ ಮನ್ನಾ ಮಾಡಲು ಸಾಧ್ಯವಿದೆ.

40 An indigent person is-
A) one who is not diligent.
B) one who is not interested in prosecuting the suit.
C) one who is not possessed of sufficient means to pay the prescribed fee on the plaint and who is not entitled to property worth Rs. 1,000/- except exempted property from attachment.
D) none of the above.

ನಿರ್ಧನಿಕ ವ್ಯಕ್ತಿ ಅಂದರೆ–
ಎ) ಜಾಗೃತನಲ್ಲದ ವ್ಯಕ್ತಿ.
ಬಿ) ದಾವೆಯನ್ನು ಮುಂದುವರಿಸಲು ಆಸಕ್ತಿ ಇಲ್ಲದ ವ್ಯಕ್ತಿ.
ಸಿ) ವಾದ ಪತ್ರಕ್ಕೆ ಸಲ್ಲಿಸಬೇಕಾದ ಸಾಕಷ್ಟು ಶುಲ್ಕ ನೀಡಲು ಶಕ್ತನಲ್ಲದ ಹಾಗು ಮನ್ನಾಗೊಳಿಸಲ್ಪಟ್ಟ ಆಸ್ತಿ ಹೊರತು ರೂ. 1,000/– ಮೌಲ್ಯದ ಆಸ್ತಿಯನ್ನು ಹೊಂದಿರದ ವ್ಯಕ್ತಿ.
ಡಿ) ಮೇಲಿನ ಯಾವುದೂ ಅಲ್ಲ.

41 When the plea of limitation is not set up as a defence-
A) the court cannot go into the question of limitation.
B) the court has a duty to look into the question of limitation.
C) only the appellate court can go into the question of limitation.
D) None of the above.

ಕಾಲಮಿತಿ ಪ್ರತಿರಕ್ಷಣೆಯನ್ನು ತೆಗೆದುಕೊಳ್ಳದೆ ಇರುವ ಸಂದರ್ಭದಲ್ಲಿ–
ಎ) ನ್ಯಾಯಾಲಯವು ಕಾಲಮಿತಿ ಪ್ರಶ್ನೆಯನ್ನು ಪರಿಶೀಲಿಸುವಂತಿಲ್ಲ.
ಬಿ) ನ್ಯಾಯಾಲಯಕ್ಕೆ ಕಾಲಮಿತಿ ಪ್ರಶ್ನೆ ಪರಿಶೀಲಿಸುವ ಕರ್ತವ್ಯವಿದೆ.
ಸಿ) ಮೇಲ್ಮನವಿ ನ್ಯಾಯಾಲಯವು ಮಾತ್ರ ಕಾಲಮಿತಿ ಪ್ರಶ್ನೆಯನ್ನು ಪರಿಶೀಲಿಸಲು ಶಕ್ಯವಿದೆ.
ಡಿ) ಮೇಲಿನ ಯಾವುದು ಅಲ್ಲ.

42 Who among the following was elevated directly from Bar to the Supreme Court?
A) Justice N.Venkatachala.
B) Justice E.S.Venkataramaiah.
C) Justice N.Santosh Hegde.
D) Justice V.Shivaraj Patil.

ಈ ಕೆಳಗಿನವರಲ್ಲಿ ಯಾರನ್ನು ವಕೀಲ ಸಮೂಹದಿಂದ ನೇರವಾಗಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳನ್ನಾಗಿ ನೇಮಿಸಲಾಯಿತು?
ಎ) ನ್ಯಾಯಮೂರ್ತಿ ಎನ್.ವೆಂಕಟಾಚಲ.
ಬಿ) ನ್ಯಾಯಮೂರ್ತಿ ಇ.ಎಸ್.ವೆಂಕಟರಾಮಯ್ಯ.
ಸಿ) ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ.
ಡಿ) ನ್ಯಾಯಮೂರ್ತಿ ವಿ.ಶಿವರಾಜ್ ಪಾಟೀಲ್.

43 2018 National Anti-Terrorism Day (NATD) was celebrated in India on-
A) May 22.
B) May 23.
C) May 21.
D) May 20.

ಭಾರತದಲ್ಲಿ 2018ರಲ್ಲಿ ರಾಷ್ಟ್ರೀಯ ಭಯೋತ್ಪಾದನಾ ನಿರೋಧ ದಿನಾಚರಣೆಯನ್ನು ಎಂದು ಆಚರಿಸಲಾಯಿತು–
ಎ) 22ನೇ ಮೇ.
ಬಿ) 23ನೇ ಮೇ.
ಸಿ) 21ನೇ ಮೇ.
ಡಿ) 20ನೇ ಮೇ.

44 Which institution is called as Bankers' Bank?
A) Blood Bank.
B) Reserve Bank of India.
C) State Bank of India.
D) None of the above.

ಕೆಳಗಿನವುಗಳಲ್ಲಿ ಬ್ಯಾಂಕುಗಳ ಬ್ಯಾಂಕ್ ಎಂದು ಯಾವುದನ್ನು ಕರೆಯಲಾಗುವುದು?
ಎ) ರಕ್ತ ನಿಧಿ.
ಬಿ) ಭಾರತೀಯ ರಿಸರ್ವ್ ಬ್ಯಾಂಕ್.
ಸಿ) ಭಾರತೀಯ ಸ್ಟೇಟ್ ಬ್ಯಾಂಕ್.
ಡಿ) ಮೇಲಿನ ಯಾವುದೂ ಅಲ್ಲ.

45 Plaintiff sues for title on the basis of a registered Will said to be executed by one 'X'. Defendant denies execution of Will. Neither 'X' during his lifetime nor his son on the death of 'X' disputed the execution. In such a case under Section 68 of the Indian Evidence Act which is the correct legal position for proof of Will?
A) Plaintiff is not required to examine any of the attesting witnesses since the document is registered one.
B) Plaintiff is not required to examine any of the attesting witnesses since testator during his life time nor his son after testator's death, disputed execution.
C) Plaintiff is required to examine the hand writing expert.
D) Plaintiff is required to examine one of the attesting witness to the will.

ಎಕ್ಸ್ ಎನ್ನುವವನು ಬರೆದುಕೊಟ್ಟಿದ್ದಾನೆ ಎಂದು ಹೇಳುವ ನೋಂದಣಿಯಾದ ಮೃತ್ಯು ಪತ್ರದ ಆಧಾರದ ಮೇಲೆ ವಾದಿ ಸ್ವಾಮ್ಯದ ದಾವೆ ಹೂಡುತ್ತಾನೆ. ಪ್ರತಿವಾದಿ ಮೃತ್ಯು ಪತ್ರ ಬರೆದುಕೊಟ್ಟಿದ್ದನ್ನು ನಿರಾಕರಿಸುತ್ತಾನೆ. ಎಕ್ಸ್ ತನ್ನ ಜೀವಿತಾವಧಿಯಲ್ಲಿಯಾಗಲೀ ಅಥವಾ ಎಕ್ಸ್ ಮೃತ ಪಟ್ಟ ನಂತರ ಆತನ ಮಗನಾಗಲಿ ಮೃತ್ಯು ಪತ್ರ ಬರೆದುಕೊಟ್ಟಿದ್ದನ್ನು ವಿವಾದಿಸುವುದಿಲ್ಲ. ಮೃತ್ಯು ಪತ್ರದ ಸಾಬೀತಿಗೆ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 68ರ ಅಡಿಯಲ್ಲಿ ಸರಿಯಾದ ಕಾನೂನು ಸ್ಥಿತಿ ಯಾವುದು?

ಎ) ದಸ್ತಾವೇಜು ನೋಂದಣಿ ಆಗಿದ್ದರಿಂದ ದೃಡೀಕರಿಸಿದ ಯಾವುದೇ ಸಾಕ್ಷಿದಾರರನ್ನು ಸಾಕ್ಷ್ಯ ವಿಚಾರಣೆ ಮಾಡುವ ಅಗತ್ಯ ವಾದಿಗೆ ಇರುವುದಿಲ್ಲ.

ಬಿ) ಮರಣ ಶಾಸನ ಕರ್ತ ತನ್ನ ಜೀವಿತಾವಧಿಯಲ್ಲಿ ಅಥವಾ ಮರಣ ಶಾಸನ ಕರ್ತ ಮೃತಪಟ್ಟ ನಂತರ ಆತನ ಮಗ ಮೃತ್ಯು ಪತ್ರ ಬರೆದು ಕೊಟ್ಟಿದ್ದನ್ನು ವಿವಾದಿಸದೆ ಇದ್ದುದರಿಂದ ದೃಡೀಕರಿಸಿದ ಯಾವುದೇ ಸಾಕ್ಷಿದಾರರನ್ನು ಸಾಕ್ಷ್ಯ ವಿಚಾರಣೆ ಮಾಡುವ ಅಗತ್ಯ ಇರುವುದಿಲ್ಲ.

ಸಿ) ಹಸ್ತಾಕ್ಷರ ತಜ್ಞರನ್ನು ಸಾಕ್ಷಿ ವಿಚಾರಣೆ ಮಾಡುವ ಅಗತ್ಯ ವಾದಿಗಿದೆ.

ಡಿ) ಮೃತ್ಯು ಪತ್ರವನ್ನು ದೃಡೀಕರಿಸಿದ ಸಾಕ್ಷಿದಾರರಲ್ಲಿ ಒಬ್ಬನನ್ನು ಸಾಕ್ಷಿ ವಿಚಾರಣೆ ಮಾಡುವ ಅಗತ್ಯ ವಾದಿಗಿದೆ.

46 A joint stock company has -

A) no legal entity.

B) a legal entity.

C) no right to absorb another company.

D) right of exemption from payment of liability when the amount exceeds rupees ten crore.

ಜಾಯಿಂಟ್ ಸ್ಟಾಕ್ ಕಂಪನಿಯು –

ಎ) ಕಾನೂನು ಅಸ್ತಿತ್ವ ಹೊಂದಿರುವುದಿಲ್ಲ.

ಬಿ) ಕಾನೂನು ಅಸ್ತಿತ್ವ ಹೊಂದಿರುತ್ತದೆ.

ಸಿ) ಇನ್ನೊಂದು ಕಂಪನಿಯನ್ನು ಲೀನಗೊಳಿಸಿಕೊಳ್ಳುವ (ಅಬ್‌ಸಾರ್ಬ್) ಹಕ್ಕನ್ನು ಹೊಂದಿರುವುದಿಲ್ಲ.

ಡಿ) ಹೊಣೆಗಾರಿಕೆಯು ಒಂದು ಕೋಟಿ ರೂಪಾಯಿಗಳಿಗಿಂತ ಅಧಿಕವಾದಾಗ ಅದರಿಂದ ವಿನಾಯಿತಿ ಪಡೆಯುವ ಹಕ್ಕು ಹೊಂದಿರುತ್ತದೆ.

47 Who among the following was awarded Jnanapeeta?

A) Sri Masthi Venkatesh Ayangar.

B) Smt.Gangoo Bai Hanagal.

C) Sri Hunasooru Krishnamurthy.

D) Sri Puttanna Kanagal.

ಕೆಳಕಂಡವರಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಯಾರು?

ಎ) ಶ್ರೀ ಮಾಸ್ತಿ ವೆಂಕಟೇಶ್ ಅಯ್ಯಂಗಾರ್.

ಬಿ) ಶ್ರೀಮತಿ ಗಂಗೂ ಬಾಯಿ ಹಾನಗಲ್.

ಸಿ) ಶ್ರೀ ಹುಣಸೂರು ಕೃಷ್ಣಮೂರ್ತಿ.

ಡಿ) ಶ್ರೀ ಪುಟ್ಟಣ್ಣ ಕಣಗಾಲ್.

48 Under Section 165 of the Indian Evidence Act-

A) Court can put questions only after both side counsel completing examination of the witness.

B) Court can put questions about any fact irrelevant also, for a specific purpose.

C) Court has no power to put irrelevant question.
D) Court can put irrelevant question only if the parties agree.

ಭಾರತ ಸಾಕ್ಷ್ಯ ಅಧಿನಿಯಮದ ಕಲಂ 165ರ ಅಡಿಯಲ್ಲಿ–
ಎ) ಉಭಯ ವಕೀಲರು ಸಾಕ್ಷಿಯ ಸಾಕ್ಷ್ಯ ವಿಚಾರಣೆ ಪೂರ್ತಿಗೊಳಿಸಿದ ನಂತರ ಮಾತ್ರ ನ್ಯಾಯಾಲಯ ಪ್ರಶ್ನೆಗಳನ್ನು ಹಾಕಬಹುದು.
ಬಿ) ನಿರ್ದಿಷ್ಟ ಉದ್ದೇಶಕ್ಕಾಗಿ ನ್ಯಾಯಾಲಯ ಯಾವುದೇ ಅಸಂಬದ್ಧ ಸಂಗತಿಗಳ ಬಗ್ಗೆ ಪ್ರಶ್ನೆಗಳನ್ನು ಹಾಕಬಹುದು.
ಸಿ) ಅಸಂಬದ್ಧ ಪ್ರಶ್ನೆಗಳನ್ನು ಹಾಕಲು ನ್ಯಾಯಾಲಯಕ್ಕೆ ಯಾವುದೇ ಅಧಿಕಾರವಿಲ್ಲ.
ಡಿ) ಪಕ್ಷಕಾರರು ಒಪ್ಪಿಕೊಂಡಾಗ ಮಾತ್ರ ನ್ಯಾಯಾಲಯವು ಅಸಂಬದ್ಧ ಪ್ರಶ್ನೆಗಳನ್ನು ಕೇಳಬಹುದು.

49 Doctrine of *Lis-pendens* indicates-
A) notice of a pending case.
B) pending litigation.
C) less pendency of the cases in the Court.
D) giving maintenance while pending litigation.

*ಲಿಸ್–ಪೆನ್‌ಡೆನ್ಸ್* ತತ್ವ ಎಂದರೆ —
ಎ) ಬಾಕಿ ಇರುವ ಕೇಸಿನ ನೋಟೀಸು.
ಬಿ) ದಾವೆಯು ಬಾಕಿ ಇರುವುದು.
ಸಿ) ನ್ಯಾಯಾಲಯದಲ್ಲಿ ಕೇಸುಗಳು ಕಡಿಮೆ ಬಾಕಿ ಇರುವುದು.
ಡಿ) ದಾವೆಯು ನಡೆಯುತ್ತಿರುವಾಗ ಭತ್ಯೆ ಕೊಡುವುದು.

50 In a suit for specific performance, as per Article 54 in the Schedule to Limitation Act, limitation begins to run-
A) from the date fixed for performance.
B) when no date is fixed, from the date when plaintiff has notice that performance is refused.
C) both (A) and (B).
D) from the date of agreement.

ಕಾಲಮಿತಿ ಅಧಿನಿಯಮ ಅನುಚ್ಛೇಧ 54ರ ಅಡಿಯಲ್ಲಿ ನಿರ್ದಿಷ್ಟ ಪರಿಹಾರಕ್ಕೆ ದಾವೆ ಸಲ್ಲಿಸಲು ಕಾಲಮಿತಿ ಪ್ರಾರಂಭವಾಗುವುದು —
ಎ) ಕರಾರು ನೆರವೇರಿಕೆಗಾಗಿ ನಿಗಧಿ ಪಡಿಸಿದ ದಿನಾಂಕದಿಂದ.
ಬಿ) ಸದರಿ ದಿನಾಂಕವನ್ನು ನಿಗದಿ ಪಡಿಸದಿದ್ದಲ್ಲಿ ಕರಾರಿನ ನೆರವೇರಿಕೆಯನ್ನು ಎದುರುದಾರರು ತಿರಸ್ಕರಿಸಿದ ವಿಷಯವು ವಾದಿಯ ಗಮನಕ್ಕೆ ಬಂದ ದಿನದಿಂದ.
ಸಿ) (ಎ) ಮತ್ತು (ಬಿ) ಎರಡೂ.
ಡಿ) ಒಪ್ಪಂದದ ದಿನಾಂಕದಿಂದ.

51 Under Section 315(1)(a) of the Code of Criminal Procedure, an accused-
A) cannot be examined as a defence witness in a case initiated on a private complaint.
B) can be examined only after examining other defence witnesses.
C) can be examined only before examining other defence witnesses.
D) cannot be examined except on his request in writing.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 315(1)(ಎ) ಅಡಿಯಲ್ಲಿ ಆರೋಪಿಯನ್ನು–
ಎ) ಖಾಸಗಿ ಫಿರ್ಯಾದಿನ ಮೇಲೆ ಪ್ರಾರಂಭಿಸಿದ ಪ್ರಕರಣದಲ್ಲಿ ಪ್ರತಿರಕ್ಷಾ ಸಾಕ್ಷ್ಯದಾರನಾಗಿ ಸಾಕ್ಷಿ ವಿಚಾರಣೆ ಮಾಡಲು ಬರುವುದಿಲ್ಲ.
ಬಿ) ಬೇರೆ ಪ್ರತಿರಕ್ಷಾ ಸಾಕ್ಷಿದಾರರನ್ನು ವಿಚಾರಣೆ ಮಾಡಿದ ನಂತರ ಸಾಕ್ಷಿ ವಿಚಾರಣೆ ಮಾಡಬಹುದು.
ಸಿ) ಬೇರೆ ಪ್ರತಿರಕ್ಷಾ ಸಾಕ್ಷಿದಾರರನ್ನು ವಿಚಾರಣೆ ಮಾಡುವ ಮೊದಲು ಸಾಕ್ಷಿ ವಿಚಾರಣೆ ಮಾಡಬಹುದು.
ಡಿ) ಅವನ ಬರವಣಿಗೆಯಲ್ಲಿ ಕೊಟ್ಟ ಕೋರಿಕೆ ಹೊರತುಪಡಿಸಿ ಸಾಕ್ಷಿ ವಿಚಾರಣೆ ಮಾಡಲು ಬರುವುದಿಲ್ಲ.

52 In a suit under Section 6 of the Specific Relief Act, which of the following is not the correct legal proposition?
A) The plaintiff who was in possession must have been dispossessed by the defendant otherwise than in due course of law.
B) The suit should not have been filed after the expiry of six months from the date of dispossession.
C) The suit should not be against the Government.
D) The defendant can plead that he has a better title to the suit property than the plaintiff and the Court in such an event can examine the title of both the parties.

ನಿರ್ದಿಷ್ಟ ಪರಿಹಾರ ಅಧಿನಿಯಮದ ಕಲಂ 6ರ ದಾವೆಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಕಾನೂನು ಪ್ರತಿಪಾದನೆ ಅಲ್ಲ?
ಎ) ಪ್ರತಿವಾದಿಯು ವಾದಿಯ ಸ್ವಾಧೀನವನ್ನು ಕಾನೂನು ಯಥಾ ಕ್ರಮವಲ್ಲದ ರೀತಿಯಲ್ಲಿ ಕಸಿದುಕೊಂಡಿರಬೇಕು.
ಬಿ) ಸ್ವಾಧೀನ ತಪ್ಪಿಸಿದ ಆರು ತಿಂಗಳ ಒಳಗಡೆ ದಾವೆ ಹೂಡಿರಬೇಕು.
ಸಿ) ದಾವೆ ಸರ್ಕಾರದ ವಿರುದ್ಧ ಇರತಕ್ಕದಲ್ಲ.
ಡಿ) ದಾವಾ ಆಸ್ತಿಯಲ್ಲಿ ವಾದಿಗಿಂತ ಉತ್ತಮ ಸ್ವಾಮ್ಯವಿದೆಯೆಂದು ಪ್ರತಿವಾದಿ ಮಂಡಿಸಬಹುದು ಮತ್ತು ಆ ಸಂದರ್ಭದಲ್ಲಿ ನ್ಯಾಯಾಲಯ ಉಭಯ ಪಕ್ಷಕಾರರನ್ನು ಸಾಕ್ಷಿ ವಿಚಾರಣೆ ಮಾಡಬಹುದು.

53 Who among the following has a first right of audience in the performance of his duties in all the courts in the territory of India?
A) State Public Prosecutor.
B) Solicitor General.
C) Attorney General.
D) None of the above.

ಈ ಕೆಳಕಂಡವರಲ್ಲಿ ಯಾರಿಗೆ ಭಾರತದ ಸೀಮೆಯಲ್ಲಿರುವ ಎಲ್ಲಾ ನ್ಯಾಯಾಲಯಗಳಲ್ಲಿ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಪ್ರಥಮ ವಾಚಕ ಹಕ್ಕು ಇದೆ?
ಎ) ರಾಜ್ಯ ಅಭಿಯೋಜಕರು.
ಬಿ) ಸಾಲಿಸಿಟರ್ ಜನರಲ್.
ಸಿ) ಅಟಾರ್ನಿ ಜನರಲ್.
ಡಿ) ಮೇಲಿನ ಯಾವುದು ಅಲ್ಲ.

54 The sentence of imprisonment prescribed under Section 511 of the Indian Penal Code for attempt to commit an offence or any act done towards such offence is-
A) 1/2 of the longest term of imprisonment provided for such offence.
B) 1/3 of the longest term of imprisonment provided for such offence.

C) 1/4 of the longest term of imprisonment provided for such offence.
D) same punishment as prescribed for such offence.

ಒಂದು ಅಪರಾಧವನ್ನು ಎಸಗಲು ಪ್ರಯತ್ನಿಸಿದ ಅಪರಾಧಕ್ಕಾಗಿ ಅಥವಾ ತನ್ಮೂಲಕ ಎಸಗಿದ ಯಾವುದೇ ಕೃತ್ಯಕ್ಕಾಗಿ ಭಾರತೀಯ ದಂಡ ಸಂಹಿತೆ ಕಲಂ 511ರ ಅಡಿಯಲ್ಲಿ ವಿಧಿಸಬಹುದಾದ ಶಿಕ್ಷೆಯು–
ಎ) ಉದ್ದೇಶಿತ ಅಪರಾಧಕ್ಕಾಗಿ ನಿಗಧಿ ಪಡಿಸಲಾದ ದೀರ್ಘ ಸೆರೆವಾಸದ 1/2 ಭಾಗ.
ಬಿ) ಉದ್ದೇಶಿತ ಅಪರಾಧಕ್ಕಾಗಿ ನಿಗಧಿ ಪಡಿಸಲಾದ ದೀರ್ಘ ಸೆರೆವಾಸದ 1/3 ಭಾಗ.
ಸಿ) ಉದ್ದೇಶಿತ ಅಪರಾಧಕ್ಕಾಗಿ ನಿಗಧಿ ಪಡಿಸಲಾದ ದೀರ್ಘ ಸೆರೆವಾಸದ 1/4 ಭಾಗ.
ಡಿ) ಉದ್ದೇಶಿತ ಅಪರಾಧಕ್ಕಾಗಿ ನಿಗದಿಪಡಿಸಿದಷ್ಟೆ ಶಿಕ್ಷೆ.

55 When a Magistrate directs an investigation by a police officer under Section 202 of the Code of Criminal Procedure -
A) it is open to the police officer to register the case and submit FIR.
B) it is open to the police officer to submit a report under Section 173 of the Code of Criminal Procedure.
C) it is open to the police officer to register the case and submit FIR as well as report under Section 173 of the Code of Criminal Procedure, only if the case is triable by a court of sessions.
D) it is not open to the police officer in any case either to register the case or submit FIR or report under Section 173 of the Code of Criminal Procedure.

ದಂಡ ಪ್ರಕ್ರಿಯಾ ಸಂಹಿತೆ ಕಲಂ 202ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ತನಿಖೆ ಮಾಡಲು ಪೋಲೀಸ್ ಅಧಿಕಾರಿಗೆ ಮ್ಯಾಜಿಸ್ಟ್ರೇಟ್ ನಿರ್ದೇಶಿಸಿದರೆ ____
ಎ) ಪ್ರಕರಣವನ್ನು ನೋಂದಾಯಿಸಲು ಮತ್ತು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಲು ಪೋಲೀಸ್ ಅಧಿಕಾರಿಗೆ ಅವಕಾಶವಿದೆ.
ಬಿ) ಪೋಲೀಸ್ ಅಧಿಕಾರಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 173ರ ಅಡಿಯಲ್ಲಿ ವರದಿ ಸಲ್ಲಿಸಬಹುದು.
ಸಿ) ಪೋಲೀಸ್ ಅಧಿಕಾರಿಯು ಸೆಷನ್ಸ್ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಬಹುದಾದ ಪ್ರಕರಣದಲ್ಲಿ ಮಾತ್ರ ಪ್ರಕರಣ ನೋಂದಾಯಿಸಲು ಮತ್ತು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 173ರ ಅಡಿಯಲ್ಲಿ ವರದಿ ಸಲ್ಲಿಸಲು ಅವಕಾಶವಿದೆ.
ಡಿ) ಪೋಲೀಸ್ ಅಧಿಕಾರಿಗೆ ಯಾವುದೇ ಸಂದರ್ಭದಲ್ಲಿ ಪ್ರಕರಣವನ್ನು ನೋಂದಾಯಿಸಲು, ಪ್ರಥಮ ವರ್ತಮಾನ ವರದಿ ಸಲ್ಲಿಸಲು ಅಥವಾ ದಂಡ ಪ್ರಕ್ರಿಯಾ ಸಂಹಿತೆ ಕಲಂ 173ರಲ್ಲಿ ವರದಿ ಸಲ್ಲಿಸಲು ಅವಕಾಶವಿಲ್ಲ.

56 Which of the following is right answer under Section 154 of the Indian Evidence Act?
A) The evidence of a hostile witness cannot be considered at all.
B) The person permitted to treat his witness hostile is not disentitled to rely on any part of the evidence of such witness.
C) Only in criminal case permission can be accorded to treat the witness as hostile.
D) Only in civil case permission can be accorded to treat the witness as hostile.

ಭಾರತ ಸಾಕ್ಷ್ಯ ಅಧಿನಿಯಮದ ಕಲಂ 154ರ ಅಡಿಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಉತ್ತರ?
ಎ) ಪ್ರತಿಕೂಲ ಸಾಕ್ಷಿಯ ಸಾಕ್ಷವನ್ನು ಪರಿಗಣಿಸಲೇಬಾರದು.

ಬಿ) ಒಬ್ಬ ವ್ಯಕ್ತಿಯ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಲು ಅನುಮತಿಸಲ್ಪಟ್ಟಲ್ಲಿ ಸದರಿ ವ್ಯಕ್ತಿಯು ಪ್ರತಿಕೂಲ ಸಾಕ್ಷಿಯ ಸಾಕ್ಷದ ಯಾವುದೇ ಭಾಗವನ್ನು ಆಧರಿಸಲು ಪ್ರತಿಬಂಧಿತನಾಗಿಲ್ಲ.
ಸಿ) ಅಪರಾಧಿಕ ಪ್ರಕರಣದಲ್ಲಿ ಮಾತ್ರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ನೀಡಬಹುದು.
ಡಿ) ದಿವಾಣಿ ಪ್ರಕರಣದಲ್ಲಿ ಮಾತ್ರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ನೀಡಬಹುದು.

57 Right *in rem* means-
A) Right over minor's property.
B) Right to remand.
C) Right available against the whole world.
D) Right to receive damages.

*ರೆಮ್* ಹಕ್ಕು ಎಂದರೆ–
ಎ) ಅಪ್ರಾಪ್ತ ವಯಸ್ಕನ ಸ್ವತ್ತಿನ ಮೇಲಿನ ಹಕ್ಕು.
ಬಿ) ಬಂಧನಕ್ಕೆ ಕಳಿಸುವ ಹಕ್ಕು.
ಸಿ) ಇಡೀ ವಿಶ್ವದ ವಿರುದ್ಧ ಇರುವ ಹಕ್ಕು.
ಡಿ) ಪರಿಹಾರವನ್ನು ಪಡೆಯುವ ಹಕ್ಕು.

58 Which Book did Mahatma Gandhi write?
A) Discovery of India.
B) The Story of My Experiments with Truth.
C) Geetanjali.
D) The Good Earth.

ಮಹಾತ್ಮಗಾಂಧಿಯವರು ಬರೆದ ಪುಸ್ತಕ ಯಾವುದು?
ಎ) ಡಿಸ್ಕವರಿ ಆಫ್ ಇಂಡಿಯಾ.
ಬಿ) ದಿ ಸ್ಟೋರಿ ಆಫ್ ಮೈ ಎಕ್ಸ್‌ಪೆರಿಮೆಂಟ್ಸ್ ವಿತ್ ಟ್ರುತ್.
ಸಿ) ಗೀತಾಂಜಲಿ.
ಡಿ) ದಿ ಗುಡ್ ಅರ್ಥ್.

59 Section 162 of Code of the Criminal Procedure provides for using the statement of a witness recorded by the police under Section 161 of the Code of Criminal Procedure-
A) if the witness supports the prosecution in order to corroborate his oral testimony.
B) if the witness turns hostile, to draw his attention to such statement, if he admits the statement, the same shall be marked.
C) if the witness turns hostile and if he denies having given such a statement, by confronting the statement to the witness, it can be marked.
D) The right to confront to the witnss and to mark the statement is available only to the accused.

ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ 161ರ ಅಡಿಯಲ್ಲಿ ಪೋಲೀಸರು ದಾಖಲಿಸಿಕೊಂಡ ಸಾಕ್ಷಿಯ ಹೇಳಿಕೆಯನ್ನು ಉಪಯೋಗಿಸುವ ಬಗ್ಗೆ ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ 162 ಉಪಬಂಧಿಸುವುದು–
ಎ) ಸಾಕ್ಷಿ ತನ್ನ ಮೌಖಿಕ ಸಾಕ್ಷವನ್ನು ಪುಷ್ಟೀಕರಿಸಲು ಅಭಿಯೋಜನೆಗೆ ಬೆಂಬಲಿಸಿದರೆ.

ಬಿ) ಒಂದು ವೇಳೆ ಸಾಕ್ಷಿ ಪ್ರತಿಕೂಲವಾಗಿ ತಿರುಗಿದಲ್ಲಿ ಆ ಹೇಳಿಕೆ ಬಗ್ಗೆ ಅವನ ಗಮನ ಸೆಳೆಯಲು, ಒಂದು ವೇಳೆ ಆ ಹೇಳಿಕೆಯನ್ನು ಒಪ್ಪಿದಲ್ಲಿ ಅದನ್ನು ಗುರುತಿಸತಕ್ಕದ್ದು.
ಸಿ) ಒಂದು ವೇಳೆ ಸಾಕ್ಷಿ ಪ್ರತಿಕೂಲವಾಗಿ ತಿರುಗಿದಲ್ಲಿ ಮತ್ತು ಕೊಟ್ಟ ಹೇಳಿಕೆಯನ್ನು ನಿರಾಕರಿಸಿದಲ್ಲಿ ಸಾಕ್ಷಿಗೆ ಆ ಹೇಳಿಕೆಯನ್ನು ಎದುರಿಗಿರಿಸಿ ಅದನ್ನು ಗುರುತಿಸಬಹುದು.
ಡಿ) ಸಾಕ್ಷಿಗೆ ಹೇಳಿಕೆಯನ್ನು ಅಭಿಮುಖಿಗೊಳಿಸಲು ಮತ್ತು ಗುರುತಿಸಲು ಆರೋಪಿಗೆ ಮಾತ್ರ ಹಕ್ಕು ಇದೆ.

60 In which of the following cases, the information received from an accused while in the custody of the Police Officer can be proved against him under the Indian Evidence Act-
A) when the case is based on circumstantial evidence.
B) when witness to depose about such information cannot be secured before the Court.
C) to corroborate the confession made before the Magistrate under Section 164 of the Code of Criminal Procedure.
D) when such information leads to discovery of fact deposed.

ಆರೋಪಿಯು ತನಿಖಾಧಿಕಾರಿಯ ಅಭಿರಕ್ಷೆಯಲ್ಲಿರುವಾಗ ನೀಡಿದ ಮಾಹಿತಿಯನ್ನು ಆತನ ವಿರುದ್ಧ ಸಾಕ್ಷವಾಗಿ ಸಾಬೀತುಪಡಿಸಲು ಸಾಕ್ಷ್ಯ ಅಧಿನಿಯಮದ ಅಡಿಯಲ್ಲಿ ಅವಕಾಶವಿರುವುದು-
ಎ) ಪ್ರಕರಣ ಸಾಂಧರ್ಬಿಕ ಸಾಕ್ಷದ ಆಧಾರದಲ್ಲಿದ್ದರೆ.
ಬಿ) ಅಂತಹ ಮಾಹಿತಿ ಬಗ್ಗೆ ಸಾಕ್ಷ ನೀಡುವ ಸಾಕ್ಷಿಯನ್ನು ನ್ಯಾಯಾಲಯದ ಎದುರು ತರಲು ಆಗದೆ ಇದ್ದಾಗ.
ಸಿ) ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ 164ರ ಅಡಿಯಲ್ಲಿ ಮ್ಯಾಜಿಸ್ಟ್ರೇಟ್ ಮುಂದೆ ನೀಡಿದ ತಪ್ಪೊಪ್ಪಿಗೆಯನ್ನು ಪುಷ್ಟೀಕರಿಸಲು.
ಡಿ) ಸಾಕ್ಷಕೊಟ್ಟ ಸಂಗತಿಯ ಪತ್ತೆ ಮಾಡುವಿಕೆಯನ್ನು ಮಾರ್ಗದರ್ಶಿಸುವ ಮಾಹಿತಿಯೆ ಬಗ್ಗೆ.

61 Limitation prescribed under Article 120 in the Schedule to the Limitation Act, 1963, for bringing the legal representatives of a deceased party to the case on record is-
A) 30 days from the date of death of party.
B) 90 days from the date of death of party.
C) 60 days from the date of death of party.
D) 90 days from the date of knowledge of the applicant about the death of the deceased party.

ಒಂದು ಪ್ರಕರಣದಲ್ಲಿ ಒಬ್ಬ ಕಕ್ಷಿದಾರನು ಮೃತನಾದಲ್ಲಿ ಆತನ ವಾರಸುದಾರರನ್ನು ಪ್ರಕರಣದಲ್ಲಿ ದಾಖಲೆಯ ಮೇಲೆ ತರಲು ಕಾಲಮಿತಿ ಕಾನೂನು ಅನುಚ್ಛೇಧ 120ರ ಅಡಿಯಲ್ಲಿ ನಿಗಿಧಿ ಪಡಿಸಲಾದ ಸಮಯವು-
ಎ) ಮೃತನಾದ ದಿನದಿಂದ 30 ದಿವಸಗಳೊಳಗೆ.
ಬಿ) ಮೃತನಾದ ದಿನದಿಂದ 90 ದಿವಸಗಳೊಳಗೆ.
ಸಿ) ಮೃತನಾದ ದಿನದಿಂದ 60 ದಿವಸಗಳೊಳಗೆ.
ಡಿ) ಮೃತನ ಮರಣದ ವಿಷಯವು ಅರ್ಜಿದಾರನ ಗಮನಕ್ಕೆ ಬಂದ 90 ದಿನಗಳೊಳಗಾಗಿ.

62 An appeal by a complainant against an order of acquittal lies under Section 378(4) of the Code of Criminal Procedure -
A) to the court of sessions.
B) to the court of sessions only if the District Magistrate permits.

C) to the High Court on the High Court granting special leave on his application for the same.
D) to the High Court if the offence is punishable with imprisonment for a term of 7 years and above, and to the court of sessions if the offence is punishable with imprisonment below 7 years.

ಬಿಡುಗಡೆಯ ಆದೇಶದ ವಿರುದ್ಧ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 378(4)ರ ಅಡಿಯಲ್ಲಿ ಫಿರ್ಯಾದಿದಾರನು ಮೇಲ್ಮನವಿ ಸಲ್ಲಿಸಬೇಕಾಗಿರುವುದು ——.
ಎ) ಸೆಷನ್ಸ್ ನ್ಯಾಯಾಲಯಕ್ಕೆ.
ಬಿ) ಜಿಲ್ಲಾ ಮ್ಯಾಜಿಸ್ಟ್ರೇಟ್ ಅನುಮತಿಸಿದರೆ ಮಾತ್ರ ಸೆಷ್‌ನ್ಸ್ ನ್ಯಾಯಾಲಯಕ್ಕೆ.
ಸಿ) ಮೇಲ್ಮನವಿ ಸಲ್ಲಿಸಲು ವಿಶೇಷ ಅನುಮತಿಗಾಗಿ ಆತನು ಸಲ್ಲಿಸಿದ ಅರ್ಜಿಯ ಮೇಲೆ ಉಚ್ಚನ್ಯಾಯಾಲಯವು ವಿಶೇಷ ಅನುಮತಿ ನೀಡಿದಾಗ, ಉಚ್ಚನ್ಯಾಯಾಲಯದಲ್ಲಿ.
ಡಿ) ಅಪರಾಧಕ್ಕೆ ನಿಗದಿ ಪಡಿಸಿದ ಶಿಕ್ಷೆ 7 ವರ್ಷ ಮತ್ತು ಅದಕ್ಕಿಂತ ಹೆಚ್ಚಾದಲ್ಲಿ ಉಚ್ಚನ್ಯಾಯಾಲಯಕ್ಕೆ ಮತ್ತು ಶಿಕ್ಷೆ 7 ವರ್ಷ ಮತ್ತು ಅದಕ್ಕಿಂತ ಕಡಿಮೆ ಇದ್ದಲ್ಲಿ ಸೆಷನ್ಸ್ ನ್ಯಾಯಾಲಯಕ್ಕೆ.

63 Whenever compromise in a suit on behalf of a minor plaintiff or defendant has to be recorded, Order XXXII Rule 7 of the Code of Civil Procedure requires filing the certificate of the following to the effect that the compromise is for the benefit of minor-
A) Jurisdictional Deputy Commissioner.
B) Jurisdictional Sub-Divisional Magistrate.
C) Pleader representing the minor.
D) Member Secretary of District Legal Services Authority.

ಅಪ್ರಾಪ್ತ ವಾದಿ ಅಥವಾ ಪ್ರತಿವಾದಿಯ ಪರವಾಗಿ ದಾವೆಯಲ್ಲಿ ರಾಜಿಯನ್ನು ದಾಖಲಿಸಬೇಕಾದಾಗ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 32 ನಿಯಮ 7ರ ಪ್ರಕಾರ ಅಪ್ರಾಪ್ತರ ಲಾಭಕ್ಕಾಗಿ ರಾಜಿ ಮಾಡುತ್ತಿದ್ದೇವೆ ಎಂದು ಪ್ರಮಾಣ ಪತ್ರ ಸಲ್ಲಿಸಬೇಕಾದವರು–
ಎ) ಅಧಿಕಾರ ವ್ಯಾಪ್ತಿಯುಳ್ಳ ಜಿಲ್ಲಾಧಿಕಾರಿ.
ಬಿ) ಅಧಿಕಾರ ವ್ಯಾಪ್ತಿಯುಳ್ಳ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್.
ಸಿ) ಅಪ್ರಾಪ್ತರನ್ನು ಪ್ರತಿನಿಧಿಸುವ ಪ್ಲೀಡರ್.
ಡಿ) ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ.

64 Which of the following is the correct statement of law under Section 90 of the Indian Evidence Act in relation to a 30 years old document?
A) Contents of such a document shall be presumed to be proved if it is produced from proper custody.
B) Contents of such a document may be presumed to be true if it is produced from proper custody.
C) Execution, attestation, hand writing and signature in such document may be presumed to be true.
D) Execution, attestation, hand writing and signature in such document shall be presumed to be true.

ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 90ರ ಅಡಿಯಲ್ಲಿ ಈ ಕೆಳಗಿನವುಗಳ ಪೈಕಿ ಯಾವುದು ಸರಿಯಾದ ಕಾನೂನು ಹೇಳಿಕೆಯಾಗಿರುತ್ತದೆ?
ಎ) 30 ವರ್ಷಗಳಷ್ಟು ಹಳೆಯದಾದ, ಯುಕ್ತ ಅಭಿರಕ್ಷೆಯಿಂದ ಹಾಜರು ಮಾಡಿದ ದಸ್ತಾವೇಜಿನ ವಿಷಯವಸ್ತು ರುಜುವಾತಾಗಿದೆ ಎಂದು ಭಾವಿಸಲೇಬೇಕು.
ಬಿ) 30 ವರ್ಷಗಳಷ್ಟು ಹಳೆಯದಾದ, ಯುಕ್ತ ಅಭಿರಕ್ಷೆಯಿಂದ ಹಾಜರು ಮಾಡಿದ ದಸ್ತಾವೇಜಿನ ವಿಷಯವಸ್ತು ಸತ್ಯವಾಗಿದೆ ಎಂದು ಭಾವಿಸಬಹುದು.
ಸಿ) ದಸ್ತಾವೇಜಿನ ನೆರವೇರಿಕೆ, ದೃಡೀಕರಣ, ಹಸ್ತಾಕ್ಷರ ಮತ್ತು ರುಜು ಸತ್ಯವಾಗಿದೆ ಎಂದು ಭಾವಿಸಬಹುದು.
ಡಿ) ದಸ್ತಾವೇಜಿನ ನೆರವೇರಿಕೆ, ದೃಡೀಕರಣ, ಹಸ್ತಾಕ್ಷರ ಮತ್ತು ರುಜು ಸತ್ಯವಾಗಿದೆ ಎಂದು ಭಾವಿಸಲೇಬೇಕು.

65 The sole certified manufacturer and supplier of Indian National Flag is-
A) Karnataka Khadi Gramodyaga Samyukta Sangha.
B) Priyadarshini Handlooms.
C) Co-optex.
D) Gujarat Village Industry Commission.

ಭಾರತದ ರಾಷ್ಟ್ರೀಯ ಧ್ವಜದ ಏಕೈಕ ಪ್ರಮಾಣಿಕೃತ ಉತ್ಪಾದಕರು ಮತ್ತು ಸರಬರಾಜುದಾರರು-
ಎ) ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘ.
ಬಿ) ಪ್ರಿಯದರ್ಶಿನಿ ಹ್ಯಾಂಡ್‌ಲೂಮ್ಸ್.
ಸಿ) ಕೋ-ಆಪ್ಟೆಕ್ಸ್.
ಡಿ) ಗುಜರಾತ್ ವಿಲೇಜ್ ಇಂಡಸ್ಟ್ರಿ ಕಮಿಷನ್.

66 Where the accused is in custody, Section 167(5) of the Code of Criminal Procedure empowers the Magistrate to stop further investigation in summons cases, if the investigation is not completed from the date of arrest within-
A) 60 days.
B) 6 months.
C) 2 years.
D) 90 days.

ಆರೋಪಿ ಅಭಿರಕ್ಷೆಯಲ್ಲಿದ್ದಾಗ ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ 167(5)ರ ಅಡಿಯಲ್ಲಿ ಸಮನ್ಸ್ ಪ್ರಕರಣದ ಮುಂದಿನ ತನಿಖೆಯನ್ನು ತಡೆಯಲು ಮ್ಯಾಜಿಸ್ಟ್ರೇಟ್‌ಗೆ ಅಧಿಕಾರ ಇರುವುದು, ತನಿಖೆಯು ಆರೋಪಿ ದಸ್ತಗಿರಿ ಆದ ದಿನಾಂಕದಿಂದ _____ ಮುಗಿಯದಿದ್ದರೆ-
ಎ) ಅರವತ್ತು ದಿನಗಳೊಳಗೆ.
ಬಿ) ಆರು ತಿಂಗಳೊಳಗೆ.
ಸಿ) ಎರಡು ವರ್ಷಗಳೊಳಗೆ.
ಡಿ) ತೊಂಬತ್ತು ದಿನಗಳೊಳಗೆ.

67 With reference to Section 37 of the Code of Civil Procedure which of the following is correct?
A) If the appellate Court reverses the decree of dismissal of the suit passed by the trial Court, the decree is said to have been passed by the appellate Court.
B) If the appellate Court confirms the decree of the trial Court decreeing the suit, decree is said to have been passed by the appellate Court.

C) If the appellate Court partly modifies the decree of the trial Court, to that extent appellate Court is said to have passed the decree.
D) In any of the above events, the decree is deemed to have been passed by the trial Court.

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 37ಕ್ಕೆ ಉಲ್ಲೇಖಿಸುವಂತೆ ಈ ಕೆಳಗಿನವುಗಳ ಪೈಕಿ ಯಾವುದು ಸರಿ?
ಎ) ವಿಚಾರಣಾ ನ್ಯಾಯಾಲಯವು ದಾವಾ ವಜಾಗೊಳಿಸಿದ ಡಿಕ್ರಿಯನ್ನು ಮೇಲ್ಮನವಿ ನ್ಯಾಯಾಲಯ ವಿಪರ್ಯಗೊಳಿಸಿದಾಗ ಮೇಲ್ಮನವಿ ನ್ಯಾಯಾಲಯದ ಆದೇಶವು ಡಿಕ್ರಿಯಾಗುತ್ತದೆ.
ಬಿ) ವಿಚಾರಣಾ ನ್ಯಾಯಾಲಯವು ದಾವೆಯಲ್ಲಿ ಪರಿಹಾರ ನೀಡಿ ಮಾಡಿದ ಡಿಕ್ರಿಯನ್ನು ಮೇಲ್ಮನವಿ ನ್ಯಾಯಾಲಯ ಸ್ಥಿರೀಕರಿಸಿದಾಗ ಮೇಲ್ಮನವಿ ನ್ಯಾಯಾಲಯ ಮಾಡಿದ ಆದೇಶವು ಡಿಕ್ರಿಯಾಗುತ್ತದೆ.
ಸಿ) ಮೇಲ್ಮನವಿ ನ್ಯಾಯಾಲಯವು ವಿಚಾರಣಾ ನ್ಯಾಯಾಲಯದ ಡಿಕ್ರಿಯನ್ನು ಭಾಗಶಃ ಮಾರ್ಪಡಿಸಿದಾಗ ಆ ಪ್ರಮಾಣಕ್ಕೆ ಸಂಬಂಧಿಸಿದಂತೆ ಮೇಲ್ಮನವಿ ನ್ಯಾಯಾಲಯ ಮಾಡಿದ ಆದೇಶ ಡಿಕ್ರಿಯೆಂದು ತಿಳಿಯತಕ್ಕದ್ದು.
ಡಿ) ಈ ಮೇಲಿನ ಯಾವುದೇ ಸಂದರ್ಭಗಳಲ್ಲಿ ವಿಚಾರಣಾ ನ್ಯಾಯಾಲಯವು ಡಿಕ್ರಿ ಮಾಡಿದೆಯೆಂದು ಭಾವಿಸತಕ್ಕದ್ದು.

68 Which of the following statement is sustainable under Section 133 of the Indian Evidence Act?
A) An accomplice is an incompetent witness.
B) Conviction based on the evidence of accomplice is unsustainable for want of his competence to depose.
C) Conviction is not illegal merely because it proceeds upon the uncorroborated testimony of an accomplice.
D) Evidence of accomplice is inadmissible in a trial for the offence punishable under Section 302 of the Indian Penal Code.

ಈ ಕೆಳಗಿನ ಹೇಳಿಕೆಗಳ ಪೈಕಿ ಯಾವುದು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 133ರಲ್ಲಿ ಊರ್ಜಿತವಾಗುತ್ತದೆ?
ಎ) ಶಾಮೀಲುದಾರ ಅಸಮರ್ಥ ಸಾಕ್ಷಿದಾರ.
ಬಿ) ಶಾಮೀಲುದಾರ ಸಾಕ್ಷಿಯು ಸಾಕ್ಷ್ಯ ಹೇಳಲು ಅಸಮರ್ಥನಿರುವುದರಿಂದ ಅವನ ಸಾಕ್ಷದ ಆಧಾರದ ಮೇಲೆ ಮಾಡಿದ ಅಪರಾಧ ನಿರ್ಣಯವು ಊರ್ಜಿತವಾಗತಕ್ಕದಲ್ಲ.
ಸಿ) ಶಾಮೀಲುದಾರನ ಪುಷ್ಟೀಕರಣರಹಿತ ಸಾಕ್ಷದ ಆಧಾರದ ಮೇಲೆ ಅಪರಾಧ ನಿರ್ಣಯ ಮಾಡಲಾಗಿದೆ ಎಂಬ ಕಾರಣದಿಂದ ಸದರಿ ನಿರ್ಣಯವು ಕಾನೂನು ಬಾಹಿರವಾಗುವುದಿಲ್ಲ.
ಡಿ) ಭಾರತ ದಂಡ ಸಂಹಿತೆ ಕಲಂ 302ರ ಅಪರಾಧದ ಸಾಕ್ಷಿ ವಿಚಾರಣೆಯಲ್ಲಿ ಶಾಮೀಲುದಾರನ ಸಾಕ್ಷ ಒಪ್ಪಿಕೊಳ್ಳತಕ್ಕದಲ್ಲ.

69 Among the following, which one is not a fundamental duty as mentioned under Article 51A of the Constitution of India?
A) to abide by the Constitution and respect its ideas and institutions, the National Flag and the National Anthem.
B) to uphold and protect the sovereignty, unity and integrity of India.
C) to safeguard public property and adjure violence.
D) to provide to the fellow citizen adequate livelihood.

ಈ ಕೆಳಗಿನವುಗಳಲ್ಲಿ ಯಾವುದು ಸಂವಿಧಾನದ ಅನುಚ್ಛೇಧ 51ಎ ರ ಅನ್ವಯ ಮೂಲಭೂತ ಕರ್ತವ್ಯವಾಗಿರುವುದಿಲ್ಲ?
ಎ) ಸಂವಿಧಾನಕ್ಕೆ ವಿಧೇಯನಾಗಿರುವುದು ಮತ್ತು ಅದರ ಆದರ್ಶಗಳು, ಸಂಸ್ಥೆಗಳು, ರಾಷ್ಟ್ರೀಯ ಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.
ಬಿ) ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು.

ಸಿ) ಸಾರ್ವಜನಿಕ ಸ್ವತ್ತನ್ನು ಸಂರಕ್ಷಿಸುವುದು ಮತ್ತು ಹಿಂಸೆಯನ್ನು ತೊರೆಯುವುದು.
ಡಿ) ಸಹ ನಾಗರಿಕರಿಗೆ ಸಾಕಷ್ಟು ಜೀವನಾಧಾರ ಒದಗಿಸುವುದು.

70 Contents of public documents as per Section 77 of the Indian Evidence Act can be proved-
A) only by examining the authors of the same.
B) by producing the certified copies of such public documents.
C) by producing the true copies of the same.
D) by examining the person acquainted with the hand writing of the scribe of the document.

ಭಾರತ ಸಾಕ್ಷ್ಯ ಅಧಿನಿಯಮದ ಕಲಂ 77ರ ಪ್ರಕಾರ ಸಾರ್ವಜನಿಕ ದಸ್ತಾವೇಜುಗಳ ವಿಷಯಗಳನ್ನು ರುಜುವಾತು ಮಾಡುವುದು–
ಎ) ಬರವಣಿಗೆ ಮಾಡಿದವರನ್ನು ಸಾಕ್ಷಿ ವಿಚಾರಣೆ ಮಾಡುವುದರಿಂದ ಮಾತ್ರ.
ಬಿ) ಸಾರ್ವಜನಿಕ ದಸ್ತಾವೇಜುಗಳ ದೃಢೀಕೃತ ನಕಲನ್ನು ಹಾಜರು ಮಾಡುವುದರಿಂದ.
ಸಿ) ಅದರ ಯಥಾ ನಕಲುಗಳನ್ನು ಹಾಜರು ಮಾಡುವುದರಿಂದ.
ಡಿ) ದಸ್ತಾವೇಜು ಬರಹಗಾರರ ಹಸ್ತಾಕ್ಷರಗಳ ಪರಿಚಯ ಇರುವವರನ್ನು ಸಾಕ್ಷಿ ವಿಚಾರಣೆ ಮಾಡುವುದರಿಂದ.

71 Nothing is an offence which is done by a child-
A) under 12 years of age.
B) under 18 years of age.
C) under 21 years of age.
D) under 7 years of age.

______ ಮಗು ಮಾಡಿದ ಕೃತ್ಯವು ಅಪರಾಧವಾಗುವುದಿಲ್ಲ.
ಎ) ಹನ್ನೆರಡು ವರ್ಷ ಕೆಳಗಿನ ವಯಸ್ಸಿನ.
ಬಿ) ಹದಿನೆಂಟು ವರ್ಷ ಕೆಳಗಿನ ವಯಸ್ಸಿನ.
ಸಿ) ಇಪ್ಪತ್ತೊಂದು ವರ್ಷ ಕೆಳಗಿನ ವಯಸ್ಸಿನ.
ಡಿ) ಏಳು ವರ್ಷ ಕೆಳಗಿನ ವಯಸ್ಸಿನ.

72 In a suit for specific performance under Section 16 of the Specific Relief Act which of the following is the mandatory requirement to obtain a decree?
A) Readiness and willingness must be pleaded and proved.
B) subsequent to the agreement, the plaintiff must not have become incapable of performance of contract.
C) Plaintiff must have become disentitled to recover compensation.
D) both (B) and (C) above

ನಿರ್ದಿಷ್ಟ ಪರಿಹಾರ ಅಧಿನಿಯಮದ ಕಲಂ 16ರ ಅಡಿಯ ದಾವೆಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಡಿಕ್ರಿ ಪಡೆಯಲು ಆಜ್ಞಾಪಕ ಅವಶ್ಯಕ.
ಎ) ನೆರವೇರಿಸಲು ಸಿದ್ಧವಾಗಿರುವುದು ಮತ್ತು ಇಷ್ಟಪಟ್ಟಿರುವುದು ಎಂಬುದನ್ನು ವಾದಪತ್ರದಲ್ಲಿ ಹೇಳಬೇಕು ಮತ್ತು ರುಜುವಾತು ಮಾಡಬೇಕು.
ಬಿ) ಕರಾರು ಮಾಡಿಕೊಂಡ ತರುವಾಯ ವಾದಿಯು ಕರಾರನ್ನು ನೆರವೇರಿಸಲು ಅಸಮರ್ಥನಾಗಿರಬಾರದು.

ಸಿ) ವಾದಿ ಪರಿಹಾರವನ್ನು ವಸೂಲಾತಿ ಮಾಡುವುದರಿಂದ ಅನರ್ಹಗೊಂಡಿರಬೇಕು.
ಡಿ) ಮೇಲಿನ (ಬಿ) ಮತ್ತು (ಸಿ) ಎರಡೂ.

73 In a regular appeal filed under Section 96 of the Code of Civil Procedure, if the appellant does not appear when the appeal is called on for hearing, which of the following procedure shall be followed under Order XLI Rule 17 of the Code of Civil Procedure?
A) Court may dismiss appeal on merits.
B) Court may hear the respondent if present, in the absence of the appellant.
C) Court may make an order that the appeal be dismissed in default.
D) (A) and (B) above.

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 96ರಡಿಯಲ್ಲಿ ಸಲ್ಲಿಸಿರುವ ಮೇಲ್ಮನವಿಯನ್ನು ಸುನಾವಣೆಗಾಗಿ ಕರೆದಾಗ ಮೇಲ್ಮನವಿದಾರ ಹಾಜರಾಗದಿದ್ದರೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 41 ನಿಯಮ 17ರಡಿಯಲ್ಲಿ ಈ ಕೆಳಕಂಡ ಯಾವ ಕ್ರಮವನ್ನು ಅನುಸರಿಸಬೇಕಾಗುತ್ತದೆ?
ಎ) ನ್ಯಾಯಾಲಯವು ಮೇಲ್ಮನವಿಯನ್ನು ಗುಣಾಂಶಗಳ ಮೇಲೆ ವಜಾ ಮಾಡಬಹುದು.
ಬಿ) ನ್ಯಾಯಾಲಯವು ಎದುರುದಾರನು ಉಪಸ್ಥಿತನಿದ್ದಲ್ಲಿ ಮೇಲ್ಮನವಿದಾರನ ಅನುಪಸ್ಥಿತಿಯಲ್ಲಿ ಎದುರುದಾರನ ವಾದವನ್ನು ಆಲಿಸಬಹುದು.
ಸಿ) ನ್ಯಾಯಾಲಯವು ಮೇಲ್ಮನವಿಯನ್ನು ಲೋಪ ಕಾರಣಕ್ಕಾಗಿ ವಜಾ ಮಾಡಿ ಆದೇಶ ಮಾಡಬಹುದು.
ಡಿ) ಮೇಲಿನ (ಎ) ಮತ್ತು (ಬಿ).

74 Under Section 17 of the Registration Act, a compromise decree-
A) is required to be registered compulsorily.
B) is required to be registered only if the suit is for declaration of title with or without consequential relief.
C) is required to be registered only if the suit is for partition.
D) is required to be registered if it comprises immovable property other than the subject matter of the suit.

ನೋಂದಣಿ ಅಧಿನಿಯಮ ಕಲಂ 17ರ ಅಡಿಯಲ್ಲಿ ರಾಜಿ ಡಿಕ್ರಿಯು–
ಎ) ಕಡ್ಡಾಯವಾಗಿ ನೋಂದಣಿಯಾಗಬೇಕಾಗುತ್ತದೆ.
ಬಿ) ದಾವೆಯು ಸ್ವಾಮ್ಯದ ಘೋಷಣೆಗೆ ಇದ್ದಲ್ಲಿ ಮಾತ್ರ, ತತ್ಪರಿಣಾಮ ಪರಿಹಾರ ಕೋರಿರಲಿ ಅಥವಾ ಕೋರದೆ ಇರಲಿ ನೋಂದಣಿ ಮಾಡಿಸಬೇಕಾಗುತ್ತದೆ.
ಸಿ) ದಾವೆಯು ಸ್ವತ್ತಿನ ವಿಭಾಗಕ್ಕಾಗಿ ಇದ್ದಲ್ಲಿ ಮಾತ್ರ ನೋಂದಾಯಿಸಬೇಕಾಗುತ್ತದೆ.
ಡಿ) ಸದರಿ ರಾಜಿ ಡಿಕ್ರಿಯು ದಾವೆಯಲ್ಲಿರುವ ಸ್ವತ್ತಿನ ಹೊರತಾಗಿ ಬೇರೆ ಸ್ವತ್ತುಗಳನ್ನು ಒಳಗೊಂಡಿದ್ದರೆ ನೋಂದಾಯಿಸಬೇಕಾಗುತ್ತದೆ.

75 To present a petition for divorce under the Hindu Marriage Act on the ground of desertion, the desertion has to be for a continuous period of-
A) not less than 2 years immediately preceding the presentation of the petition.
B) not less than 1 year immediately preceding the presentation of the petition.

C) not less than 6 months immediately preceding the presentation of the petition.
D) not less than 3 months immediately preceding the presentation of the petition.

ತ್ಯಜನ ಕಾರಣಕ್ಕಾಗಿ ವಿವಾಹ ವಿಚ್ಛೇಧನ ಕೋರಿ ಹಿಂದೂ ವಿವಾಹ ಕಾಯ್ದೆ ಅಡಿಯಲ್ಲಿ ಅರ್ಜಿ ಸಲ್ಲಿಸ ಬೇಕಾದರೆ ನಿಗದಿಗೊಳಿಸಿದ ಸತತ ತ್ಯಜನ ಅವಧಿಯು –
ಎ) ಅರ್ಜಿ ಸಲ್ಲಿಸಿದ ದಿನದ ನಿಕಟಪೂರ್ವದಲ್ಲಿ 2 ವರ್ಷಕ್ಕಿಂತ ಕಡಿಮೆ ಇರಬಾರದು.
ಬಿ) ಅರ್ಜಿ ಸಲ್ಲಿಸಿದ ದಿನದ ನಿಕಟಪೂರ್ವದಲ್ಲಿ 1 ವರ್ಷಕ್ಕಿಂತ ಕಡಿಮೆ ಇರಬಾರದು.
ಸಿ) ಅರ್ಜಿ ಸಲ್ಲಿಸಿದ ದಿನದ ನಿಕಟಪೂರ್ವದಲ್ಲಿ 6 ತಿಂಗಳಿಗಿಂತ ಕಡಿಮೆ ಇರಬಾರದು.
ಡಿ) ಅರ್ಜಿ ಸಲ್ಲಿಸಿದ ದಿನದ ನಿಕಟಪೂರ್ವದಲ್ಲಿ 3 ತಿಂಗಳಿಗಿಂತ ಕಡಿಮೆ ಇರಬಾರದು.

76 Plaintiff files a suit in 2018 for declaration of title and permanent injunction in respect of an agricultural land assessed to land revenue, claiming title under a sale deed dated 30.9.1985, in which sale consideration is shown as Rs.50,000/-. As per Section 7(1) of Karnataka Court Fees and Suits Valuation Act, market value of the suit property in the case for the purpose of court fee shall be determined at-
A) Rs.50,000/- namely the sale consideration shown in the sale deed.
B) market value as on the date of presentation of the plaint.
C) the value of the similar contiguous land.
D) Rs.1,000/-.

ವಾದಿಯು ತಾನು ದಿನಾಂಕ 30.09.1985ರ ಕ್ರಯ ಪತ್ರದ ಪ್ರಕಾರ ರೂ.50,000/– ಗಳಿಗೆ ಕೊಂಡುಕೊಂಡಿರುವನೆಂದು ತೋರಿಸಲಾದ ಭೂ ಕಂದಾಯಕ್ಕೆ ಒಳಪಟ್ಟ ಕೃಷಿ ಜಮೀನಿನ ಸ್ವಾಮ್ಯದ ಹಕ್ಕು ಘೋಷಣೆಗೆ ಮತ್ತು ಶಾಶ್ವತ ನಿರ್ಬಂದಕಾಜ್ಞೆ ಕೋರಿ 2018ರಲ್ಲಿ ದಾವೆ ಸಲ್ಲಿಸಿದ್ದಾನೆ. ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ದಾವಾ ಮೌಲ್ಯ ಮಾಪನ ಅಧಿನಿಯಮ ಕಲಂ 7(1)ರ ಪ್ರಕಾರ ಸದರಿ ಪ್ರಕರಣದಲ್ಲಿ ದಾವಾ ಸ್ವತ್ತಿನ ಮಾರುಕಟ್ಟೆಯ ಮೌಲ್ಯವನ್ನು ನ್ಯಾಯಾಲಯ ಶುಲ್ಕ ಪಾವತಿಗಾಗಿ ನಿಗದಿ ಪಡಿಸಬೇಕಾಗಿರುವ ಮೌಲ್ಯ–
ಎ) ಕ್ರಯ ಪತ್ರದಲ್ಲಿ ತೋರಿಸಿರುವ ಕ್ರಯ ಪ್ರತಿಫಲ ರೂ.50,000/–.
ಬಿ) ದಾವೆ ಸಲ್ಲಿಸಿದ ದಿನಾಂಕದಂದಿನ ಸ್ವತ್ತಿನ ಮಾರುಕಟ್ಟೆ ಮೌಲ್ಯ.
ಸಿ) ಅಕ್ಕಪಕ್ಕದಲ್ಲಿರುವ ತತ್ಸಮಾನವಾದ ಜಮೀನುಗಳ ಮೌಲ್ಯ.
ಡಿ) ರೂ.1,000/–.

77 Procedure when defendant refuses to accept service of summons, is under-
A) Order V Rule 15 of the Code of Civil Procedure.
B) Order V Rule 16 of the Code of Civil Procedure.
C) Order V Rule 17 of the Code of Civil Procedure.
D) Order V Rule 18 of the Code of Civil Procedure.

ಪ್ರತಿವಾದಿಯು ನ್ಯಾಯಾಲಯದ ನೋಟಿಸ್ ಜಾರಿಯನ್ನು ನಿರಾಕರಿಸಿದಾಗ ಅನುಸರಿಸಬೇಕಾದ ಕ್ರಮವನ್ನು ಈ ಕೆಳಕಂಡದರಲ್ಲಿ ಸೂಚಿಸಿದೆ–
ಎ) ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 5 ನಿಯಮ 15.
ಬಿ) ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 5 ನಿಯಮ 16.

ಸಿ) ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 5 ನಿಯಮ 17.
ಡಿ) ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 5 ನಿಯಮ 18.

78 Under Section 19 of the Specific Relief Act, specific performance of a contract may be enforced against-
A) either party thereto.
B) any other person claiming under such party to the contract by a title arising subsequently to the contract except a transferee for value who has paid his money in good faith and without notice of the original contract.
C) any person claiming under a title which, though prior to the contract and known to the plaintiff, might have been displaced by the defendant.
D) all the above.

ನಿರ್ದಿಷ್ಟ ಪರಿಹಾರ ಅಧಿನಿಯಮ, ಕಲಂ 19ರ ಅಡಿಯಲ್ಲಿ ಒಪ್ಪಂದದ ನಿರ್ದಿಷ್ಟ ಪರಿಹಾರ ಕ್ರಮವನ್ನು ಈ ಕೆಳಕಂಡವರ ವಿರುದ್ಧ ಜಾರಿಗೊಳಿಸಬಹುದು-
ಎ) ಒಪ್ಪಂದದ ಯಾವುದೇ ಪಕ್ಷಕಾರರ ವಿರುದ್ಧ.
ಬಿ) ಮೂಲ ಕರಾರನ್ನು ಕೂಲಂಕುಷವಾಗಿ ಪರಿಶೀಲಿಸದೆ ಸದ್ಭಾವದಿಂದ ಹಣ ಸಂದಾಯ ಮಾಡಿ ಮೌಲ್ಯಕ್ಕಾಗಿ ವರ್ಗಾಂತರಿತನನ್ನು ಹೊರತುಪಡಿಸಿ ಕರಾರಿನ ತರುವಾಯ ಉದ್ಭವಿಸಿದ ಹಕ್ಕಿನಿಂದ ಸದರಿ ಕರಾರುದಾರನ ಮೂಲಕ ಹಕ್ಕು ಪ್ರತಿಪಾದಿಸುತ್ತಿರುವ ಯಾವನೇ ವ್ಯಕ್ತಿಯ ವಿರುದ್ಧ.
ಸಿ) ಕರಾರಿಗೆ ಮುಂಚಿನದಾಗಿದ್ದೂ ಮತ್ತು ವಾದಿಗೆ ತಿಳಿದಿದ್ದೂ, ಪ್ರತಿವಾದಿಯಿಂದ ಸ್ಥಾನಪಲ್ಲಟವಾಗಬಹುದಾಗಿದ್ದ ಹಕ್ಕಿನ ಮೇರೆಗೆ ಹಕ್ಕು ಪ್ರತಿಪಾದಿಸುತ್ತಿರುವ ಯಾವನೇ ವ್ಯಕ್ತಿಯ ವಿರುದ್ಧ.
ಡಿ) ಮೇಲಿನ ಎಲ್ಲವೂ.

79 In Mohammadan Law 'Khula' is a form of-
A) Gift
B) Divorce.
C) Dowry.
D) Marriage.

ಮೊಹಮದೀಯ ಕಾನೂನಿನಡಿಯಲ್ಲಿ 'ಖುಲಾ' ಎನ್ನುವುದು ಕೆಳಕಂಡ ಯಾವುದನ್ನು ಸೂಚಿಸುತ್ತದೆ?
ಎ) ದಾನ.
ಬಿ) ವಿಚ್ಛೇದನೆ.
ಸಿ) ವರದಕ್ಷಿಣೆ.
ಡಿ) ವಿವಾಹ.

80 A promissory note-
A) includes a bank note.
B) does not include a bank note.
C) contains conditional undertaking by the maker to pay money.
D) none of the above.

ಪ್ರಾಮಿಸರಿ ನೋಟು ಅಂದರೆ-
ಎ) ಬ್ಯಾಂಕ್ ನೋಟು ಒಳಗೊಂಡಿರುತ್ತದೆ.
ಬಿ) ಬ್ಯಾಂಕ್ ನೋಟು ಒಳಗೊಂಡಿರುವುದಿಲ್ಲ.

ಸಿ) ಬರೆದುಕೊಟ್ಟವನು ಷರತ್ತುಬದ್ಧವಾಗಿ ಹಣವನ್ನು ಕೊಡಲು ಬದ್ಧ.
ಡಿ) ಮೇಲಿನ ಯಾವುದೂ ಅಲ್ಲ.

81 The judgment of the Hon'ble Apex Court in Vishakha's Case deals with-
A) dowry death.
B) domestic violence.
C) offences against children.
D) sexual harassment of women at work place.

ವಿಶಾಖಾ ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪು ಯಾವ ವಿಷಯದ ಕುರಿತು ಆಗಿದೆ–
ಎ) ವರದಕ್ಷಿಣೆಯ ಸಾವು.
ಬಿ) ಕೌಟುಂಬಿಕ ದೌರ್ಜನ್ಯ.
ಸಿ) ಮಕ್ಕಳ ವಿರುದ್ಧದ ಅಪರಾಧ.
ಡಿ) ಕಾರ್ಯ ನಿರ್ವಹಿಸುವ ಸ್ಥಳದಲ್ಲಿ ಮಹಿಳೆಯರ ಮೇಲೆ ಎಸಗುವ ಲೈಂಗಿಕ ದೌರ್ಜನ್ಯ.

82 Under Section 34 of the Code of Civil Procedure interest payable in a money recovery decree -
A) from the date of the suit till the date of decree cannot exceed 6% p.a.
B) from the date of the decree till the date of payment shall not exceed 6% p.a.
C) from the date of suit till the date of payment can exceed 6% p.a. where the liability arises out of a commercial transaction, upto contractual rate or at the lending rates of nationalized banks.
D) none of the above.

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 34ರ ಅಡಿಯಲ್ಲಿ ಹಣ ವಸೂಲಾತಿ ಡಿಕ್ರಿಯಲ್ಲಿ ಪಾವತಿಸಬಹುದಾದ ಬಡ್ಡಿ –
ಎ) ದಾವೆಯ ದಿನಾಂಕದಿಂದ ಡಿಕ್ರಿಯ ದಿನಾಂಕದವರೆಗೆ ವಾರ್ಷಿಕವಾಗಿ ಪ್ರತಿಶತಃ 6ನ್ನು ಮೀರಕೂಡದು.
ಬಿ) ಡಿಕ್ರಿಯ ದಿನಾಂಕದಿಂದ ಸಂದಾಯ ಮಾಡಬೇಕಾದ ದಿನಾಂಕದವರೆಗೆ ವಾರ್ಷಿಕವಾಗಿ ಪ್ರತಿಶತಃ 6ನ್ನು ಮೀರಕೂಡದು.
ಸಿ) ವಾಣಿಜ್ಯ ವ್ಯವಹಾರದಿಂದ ಉದ್ಭವಿಸುವ ಹೊಣೆಗಾರಿಕೆಯಲ್ಲಿ ಬಡ್ಡಿ ದರವು ದಾವೆಯ ದಿನಾಂಕದಿಂದ ಸಂದಾಯ ಮಾಡುವ ದಿನಾಂಕದವರೆಗೆ ವಾರ್ಷಿಕವಾಗಿ ಪ್ರತಿಶತಃ 6 ಮೀರಬಹುದು ಆದರೆ ಕರಾರು ಬಡ್ಡಿಯ ದರ ಅಥವಾ ರಾಷ್ಟ್ರೀಕೃತ ಬ್ಯಾಂಕುಗಳ ಸಾಲದ ಬಡ್ಡಿ ದರವನ್ನು ಮೀರತಕ್ಕದ್ದಲ್ಲ.
ಡಿ) ಮೇಲಿನ ಯಾವುದು ಅಲ್ಲ.

83 Section 138 of the Indian Evidence Act, 1872, lays down the -
A) manner and order of examination of a witness.
B) manner of examination-in-chief only.
C) manner of cross-examination only.
D) manner of re-examination only .

ಭಾರತೀಯ ಸಾಕ್ಷ್ಯ ಅಧಿನಿಯಮ, 1872, ಕಲಂ 138 ಕಲ್ಪಿಸಿರುವುದು –
ಎ) ಸಾಕ್ಷಿಯನ್ನು ವಿಚಾರಣೆಗೊಳಿಸುವ ರೀತಿ ಮತ್ತು ಕ್ರಮ.
ಬಿ) ಮುಖ್ಯ ವಿಚಾರಣೆಯನ್ನು ಜರುಗಿಸುವ ರೀತಿಯನ್ನು ಮಾತ್ರ.
ಸಿ) ಪಾಟೀ ಸವಾಲನ್ನು ಜರುಗಿಸುವ ರೀತಿಯನ್ನು ಮಾತ್ರ.
ಡಿ) ಮರು ವಿಚಾರಣೆಯನ್ನು ಜರುಗಿಸುವ ರೀತಿಯನ್ನು ಮಾತ್ರ.

84 Under Section 65 of the Code of Civil Procedure, the immovable property sold in execution of a decree is deemed to have vested in the purchaser-
A) from the date on which sale certificate is issued under Order XXI Rule 94 of the Code of Civil Procedure.
B) from the time when the property is sold.
C) from the date on which purchase money is paid.
D) from the date on which sale becomes absolute under Order XXI Rule 92 of the Code of Civil Procedure.

ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 65ರ ಅಡಿಯಲ್ಲಿ ಡಿಕ್ರಿಯ ಅಮಲ್ಜಾರಿಯಲ್ಲಿ ಸ್ಥಿರ ಸ್ವತ್ತನ್ನು ಮಾರಾಟ ಮಾಡಲಾಗಿರುವಲ್ಲಿ ಸ್ವತ್ತು ಖರೀದಿದಾರನಲ್ಲಿ ನಿಹಿತವಾಗದೆಯೆಂದು ಭಾವಿಸಿವುದು–
ಎ) ಸಿವಿಲ್ ಪ್ರಕಿಯಾ ಸಂಹಿತೆಯ ಕ್ರಮಾದೇಶ 21 ನಿಯಮ 94ರ ಅಡಿಯಲ್ಲಿ ಮಾರಾಟ ಪ್ರಮಾಣ ಪತ್ರ ಹೊರಡಿಸಿದ ದಿನಾಂಕದಿಂದ.
ಬಿ) ಆಸ್ತಿಯನ್ನು ಮಾರಾಟ ಮಾಡಿದ ಸಮಯದಿಂದ.
ಸಿ) ಖರೀದಿ ಹಣವನ್ನು ಪಾವತಿಸಿದ ದಿನಾಂಕದಿಂದ.
ಡಿ) ಸಿವಿಲ್ ಪ್ರಕಿಯಾ ಸಂಹಿತೆಯ ಕ್ರಮಾದೇಶ 21 ನಿಯಮ 92ರಲ್ಲಿ ಮಾರಾಟವನ್ನು ದೃಡೀಕರಿಸಿದ ದಿನಾಂಕದಿಂದ.

85 International Day of Yoga is celebrated annually on -
A) June 21st.
B) December 21st.
C) February 21st.
D) January 21st.

ಅಂತರರಾಷ್ಟ್ರೀಯ ಯೋಗ ದಿನವನ್ನು ವಾರ್ಷಿಕವಾಗಿ ಆಚರಿಸುವುದು –
ಎ) 21ನೇ ಜೂನ್.
ಬಿ) 21ನೇ ಡಿಸೆಂಬರ್.
ಸಿ) 21ನೇ ಫೆಬ್ರವರಿ.
ಡಿ) 21ನೇ ಜನವರಿ.

86 An exparte decree for eviction passed by the trial Court is set aside in appeal. In the meantime the decree holder took possession of the property by executing the decree. The defendant files an application under Section 144 of the Code of Civil Procedure and plaintiff opposes the same. From amongst the following rival contentions, which of them is sustainable under Section 144 of the Code of Civil Procedure?
A) Decree having already been executed, the application under Section 144 of the Code of Civil Procedure is not maintainable.
B) Remedy of the defendant is to file a separate suit for possession and not by way of an application under Section 144 of the Code of Civil Procedure.
C) On putting the plaintiff in possession in execution of the decree, Court becomes functus officio, entertaining the application under Section 144 of the Code of Civil Procedure thereafter amounts to reopening of the case.
D) That the decree has been executed is not a ground to reject the application under Section 144 of the Code of Civil Procedure.

ವಿಚಾರಣಾ ನ್ಯಾಯಾಲಯ ಮಾಡಿದ ಏಕಪಕ್ಷೀಯ ಡಿಕ್ರಿಯನ್ನು ಮೇಲ್ಮನವಿ ನ್ಯಾಯಾಲಯ ರದ್ದು ಪಡಿಸಿದೆ, ಈತನ್ಮಧ್ಯೆ ಡಿಕ್ರಿದಾರ ಅಮಲ್ಜಾರಿಯಲ್ಲಿ ಆಸ್ತಿಯ ಸ್ವಾಧೀನವನ್ನು ಪಡೆದುಕೊಂಡಿದ್ದಾನೆ. ಪ್ರತಿವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 144ರಲ್ಲಿ ಅರ್ಜಿ ಸಲ್ಲಿಸುತ್ತಾನೆ ಮತ್ತು ವಾದಿಯು ಅದನ್ನು ವಿರೋಧಿಸುತ್ತಾನೆ. ಉಭಯತರ ಕೆಳಕಂಡ ವಾದಗಳಲ್ಲಿ ಯಾವುದು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 144ರಲ್ಲಿ ಊರ್ಜಿತವಾಗುತ್ತದೆ?

ಎ) ಈಗಾಗಲೇ ಡಿಕ್ರಿ ಅಮಲ್ಜಾರಿಗೊಂಡಿರುವುದರಿಂದ ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 144ರಲ್ಲಿ ಅರ್ಜಿಯು ಊರ್ಜಿತವಾಗುವುದಿಲ್ಲ.

ಬಿ) ಪ್ರತಿವಾದಿಯ ಪರಿಹಾರವು ಪ್ರತ್ಯೇಕ ಸ್ವಾಧೀನ ದಾವೆಯನ್ನು ದಾಖಲಿಸುವುದು ಇರುತ್ತದೆ ಹೊರತು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 144ರಲ್ಲಿ ಅರ್ಜಿ ಸಲ್ಲಿಸುವುದಲ್ಲ.

ಸಿ) ಅಮಲ್ಜಾರಿಯ ಪ್ರಕ್ರಿಯೆಯಲ್ಲಿ ವಾದಿಗೆ ಸ್ವತ್ತಿನ ಸ್ವಾಧೀನವನ್ನು ಕೊಡಿಸಿದ ನಂತರ ನ್ಯಾಯಾಲಯ ಕಾರ್ಯರಹಿತವಾಗುತ್ತದೆ. ಆದ್ದರಿಂದ ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 144ರಲ್ಲಿ ಅರ್ಜಿ ಸ್ವೀಕರಿಸುವುದು ಪ್ರಕರಣವನ್ನು ಪುನರಾರಂಭಿಸಿದಂತೆ ಆಗುವುದು.

ಡಿ) ಡಿಕ್ರಿಯನ್ನು ಜಾರಿಗೊಳಿಸಲಾಗಿದೆ ಎಂಬುವುದು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕಲಂ 144ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಲು ಕಾರಣವಾಗುವುದಿಲ್ಲ.

87 Section 115 of the Indian Evidence Act, 1872, relates to-
A) presumption.
B) estoppel.
C) adverse inference.
D) none of the above.

ಭಾರತೀಯ ಸಾಕ್ಷ್ಯ ಅಧಿನಿಯಮ, 1872, ಕಲಂ 115 ಸಂಬಂಧಿಸಿರುವುದು –
ಎ) ಪೂರ್ವಭಾವನೆ.
ಬಿ) ವಿಬಂಧ.
ಸಿ) ಪ್ರತಿಕೂಲ ಊಹೆ.
ಡಿ) ಮೇಲಿನ ಯಾವುದೂ ಅಲ್ಲ.

88 Police file a charge sheet before the Magistrate for offences punishable under Sections 498-A and 494 of the Indian Penal Code-
A) Magistrate cannot proceed on such charge sheet as the offence under Section 494 of the Indian Penal Code is non-cognizable.
B) Magistrate can take cognizance only for the offence under Section 498-A of the Indian Penal Code.
C) Magistrate can take cognizance for both the offences.
D) Magistrate has to direct the aggrieved person to file a private complaint for the offence under Section 494 of the Indian Penal Code and proceed with the case in respect of Section 498-A of the Indian Penal Code.

ಭಾರತ ದಂಡ ಸಂಹಿತೆಯ ಕಲಂ 498–ಎ ಮತ್ತು 494ರ ಅಡಿಯಲ್ಲಿ ಮಾಡಿದ ಅಪರಾಧದ ಬಗ್ಗೆ ಪೋಲಿಸರು ದೋಷಾರೋಪಣ ಪತ್ರ ಸಲ್ಲಿಸುತ್ತಾರೆ–

ಎ) ಭಾರತ ದಂಡ ಸಂಹಿತೆಯ ಕಲಂ 494 ಅಸಂಜ್ಞೇಯ ಅಪರಾಧ ಆಗಿರುವುದರಿಂದ ಅಂತಹ ದೋಷಾರೋಪಣ ಪತ್ರದ ಬಗ್ಗೆ ಮ್ಯಾಜಿಸ್ಟ್ರೇಟ್ ಮುಂದುವರೆಯಲು ಬರುವುದಿಲ್ಲ.

ಬಿ) ಭಾರತ ದಂಡ ಸಂಹಿತೆಯ ಕಲಂ 498(ಎ) ಅಡಿಯಲ್ಲಿನ ಅಪರಾಧದ ಬಗ್ಗೆ ಮಾತ್ರ ಮ್ಯಾಜಿಸ್ಟ್ರೇಟ್ ಸಂಜ್ಞೇಯ ತಗೆದುಕೊಳ್ಳಬಹುದು.

ಸಿ) ಮ್ಯಾಜಿಸ್ಟ್ರೇಟ್ ಎರಡೂ ಅಪರಾಧಗಳ ಬಗ್ಗೆ ಸಂಜ್ಞೇಯ ತೆಗೆದುಕೊಳ್ಳಬಹುದು.
ಡಿ) ಮ್ಯಾಜಿಸ್ಟ್ರೇಟರು ಬಾಧಿತ ವ್ಯಕ್ತಿ ಭಾರತ ದಂಡ ಸಂಹಿತೆಯ ಕಲಂ 494ರ ಅಪರಾಧಕ್ಕಾಗಿ ಖಾಸಗಿ ಫಿರ್ಯಾದನ್ನು ಸಲ್ಲಿಸಲು ನಿರ್ದೇಶಿಸಿ ಭಾರತ ದಂಡ ಸಂಹಿತೆ ಕಲಂ 498(ಎ) ಅಪರಾಧದ ಬಗ್ಗೆ ಪ್ರಕರಣವನ್ನು ಮುಂದುವರಿಸಬೇಕು.

89 Which of the following section bars the Court from taking cognizance of an offence against a Judge or Magistrate or public servant when such offence is alleged to have taken place during the discharge of his official duties as such?
A) Section 190 of the Code of Criminal Procedure.
B) Section 193 of the Code of Criminal Procedure.
C) Section 197 of the Code of Criminal Procedure.
D) Section 198 of the Code of Criminal Procedure.

ಒಬ್ಬ ನ್ಯಾಯಾಧೀಶರು, ದಂಡಾಧಿಕಾರಿ ಅಥವಾ ಸಾರ್ವಜನಿಕ ಸೇವಕ ತನ್ನ ಸೇವಾ ನಿರ್ವಹಣೆಯ ಸಂದರ್ಭದಲ್ಲಿ ಅಪರಾಧ ಎಸಗಿದ್ದಾನೆಂದು ದೂರು ಸಲ್ಲಿಸಿದಾಗ ಸದರಿ ಅಪರಾಧದ ಸಂಜ್ಞೇಯನ್ನು ತೆಗೆದುಕೊಳ್ಳುವುದನ್ನು ಈ ಕೆಳಕಂಡ ಯಾವ ಕಾನೂನಿನಡಿಯಲ್ಲಿ ಪ್ರತಿಬಂಧಿಸಲಾಗಿದೆ?
ಎ) ದಂಡ ಪ್ರಕ್ರಿಯಾ ಸಂಹಿತೆಯ ಕಲಂ 190.
ಬಿ) ದಂಡ ಪ್ರಕ್ರಿಯಾ ಸಂಹಿತೆಯ ಕಲಂ 193.
ಸಿ) ದಂಡ ಪ್ರಕ್ರಿಯಾ ಸಂಹಿತೆಯ ಕಲಂ 197.
ಡಿ) ದಂಡ ಪ್ರಕ್ರಿಯಾ ಸಂಹಿತೆಯ ಕಲಂ 198.

90 'A' executes a sale deed in favour of 'B' in respect of a house owned by him. In the sale deed, the house is shown as being situated in town 'X'. However, 'A' owns no house in town 'X', but he owns a house in town 'Y'. In such situation in the suit filed by 'B' for possession based on the sale deed which of the following contentions is sustainable under Section 95 of the Indian Evidence Act?
A) 'B' cannot be permitted to lead evidence to show that the house referred to in the sale deed is in 'Y' town.
B) 'B' can be permitted to lead evidence to show that the sale deed in fact meant the house situated in 'Y' town.
C) 'B' can be permitted to lead such evidence only if 'A' admits that he owned no house in 'X' town.
D) 'B' can be permitted to lead such evidence only if 'A' admits that he owned a house in 'Y' town.

'ಎ' ಯು ಆತನ ಸ್ವಾಮ್ಯದ ಒಂದು ಮನೆಯ ಬಗ್ಗೆ 'ಬಿ' ಗೆ ಕ್ರಯ ಪತ್ರ ಬರೆದು ಕೊಡುತ್ತಾನೆ. ಆ ಪತ್ರದಲ್ಲಿ ಮನೆಯು ಎಕ್ಸ್ ಪಟ್ಟಣದಲ್ಲಿ ಇದೆ ಎಂದು ತೋರಿಸಲಾಗಿದೆ. ಅದಾಗ್ಯೂ ಎ ಯು ಎಕ್ಸ್ ಪಟ್ಟಣದಲ್ಲಿ ಯಾವುದೇ ಮನೆಯನ್ನು ಹೊಂದಿಲ್ಲ, ಆದರೆ ವೈ ಪಟ್ಟಣದಲ್ಲಿ ಮನೆಯನ್ನು ಹೊಂದಿರುತ್ತಾನೆ. ಆ ಪರಿಸ್ಥಿತಿಯಲ್ಲಿ ಕ್ರಯ ಪತ್ರದ ಆಧಾರದ ಮೇಲೆ ಹೂಡಿದ ದಾವೆಯಲ್ಲಿ ಈ ಕೆಳಗಿನ ಯಾವ ವಾದ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 95ರಲ್ಲಿ ಊರ್ಜಿತವಾಗುತ್ತದೆ?
ಎ) ಕ್ರಯ ಪತ್ರದಲ್ಲಿ ಉಲ್ಲೇಖಿಸಿದ ಮನೆಯು ವೈ ಪಟ್ಟಣದಲ್ಲಿದೆ ಎಂದು ಬಿ ಸಾಕ್ಷ್ಯ ನೀಡಲು ಅನುಮತಿಸಲು ಆಗುವುದಿಲ್ಲ.

ಬಿ) ಕ್ರಯ ಪತ್ರ ವೈ ಪಟ್ಟಣಕ್ಕೆ ಸಂಬಂಧಿಸಿದ ಮನೆಯ ಕುರಿತು ಎಂದು ಅರ್ಥೈಸಲು ಬಿ ಯು ಸಾಕ್ಷ್ಯ ನೀಡಲು ಅನುಮತಿಸಬಹುದು.
ಸಿ) ಎಕ್ಸ್ ಪಟ್ಟಣದಲ್ಲಿ ತನಗೆ ಯಾವುದೇ ಮನೆಯಿಲ್ಲ ಎಂದು ಎ ಒಪ್ಪಿದರೆ ಮಾತ್ರ ಬಿ ಯು ಅಂತಹ ಸಾಕ್ಷ್ಯ ನೀಡಲು ಅನುಮತಿಸಬಹುದು.
ಡಿ) ವೈ ಪಟ್ಟಣದಲ್ಲಿ ತನಗೆ ಮನೆಯಿದೆ ಎಂದು ಎ ಒಪ್ಪಿದರೆ ಮಾತ್ರ ಬಿ ಯು ಅಂತಹ ಸಾಕ್ಷ್ಯ ನೀಡಲು ಅನುಮತಿಸಬಹುದು.

91 Once a final report is submitted under Section 173 of the Code of Criminal Procedure -
A) police cannot make any further investigation.
B) police can make further investigation only in respect of heinous offences.
C) police are not precluded from making any further investigation.
D) police can make further investigation only when the absconding accused is traced.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 173ರ ಅಡಿಯಲ್ಲಿ ಅಂತಿಮ ವರದಿಯನ್ನು ಸಲ್ಲಿಸಿದಾಗ ______
ಎ) ಪೋಲೀಸರು ಮುಂದಿನ ತನಿಖೆಯನ್ನು ಮಾಡಲು ಬರುವುದಿಲ್ಲ.
ಬಿ) ಪೋಲೀಸರು ಹೇಯ ಅಪರಾಧಗಳಲ್ಲಿ ಮಾತ್ರ ಮುಂದಿನ ತನಿಖೆಯನ್ನು ಮಾಡಬಹುದು.
ಸಿ) ಮುಂದಿನ ತನಿಖೆ ಮಾಡುವುದರಿಂದ ಪೋಲೀಸರು ಪ್ರತಿಬಂಧಿತರಾಗಿಲ್ಲ.
ಡಿ) ತಲೆ ಮರೆಸಿಕೊಂಡ ಆರೋಪಿ ಪತ್ತೆ ಆದಾಗ ಮಾತ್ರ ಪೋಲೀಸರು ಮುಂದಿನ ತನಿಖೆ ಮಾಡಬಹುದು.

92 A witness unable to speak, gives his evidence in writing. The same shall be -
A) rejected as it is no oral evidence.
B) considered as secondary evidence.
C) deemed to be oral evidence.
D) none of the above.

ಮಾತನಾಡಲು ಸಮರ್ಥನಲ್ಲದ ಸಾಕ್ಷಿಯು ತನ್ನ ಸಾಕ್ಷ್ಯವನ್ನು ಬರವಣಿಗೆಯಲ್ಲಿ ನ್ಯಾಯಾಲಯದಲ್ಲಿ ಕೊಟ್ಟಾಗ ಅಂತಹ ಸಾಕ್ಷ್ಯವನ್ನು ______
ಎ) ಮೌಖಿಕ ಸಾಕ್ಷ್ಯವಲ್ಲದ್ದರಿಂದ ತಿರಸ್ಕರಿಸಬೇಕು.
ಬಿ) ದ್ವಿತೀಯಕ ಸಾಕ್ಷ್ಯವೆಂದು ಭಾವಿಸಬೇಕು.
ಸಿ) ಮೌಖಿಕ ಸಾಕ್ಷ್ಯವೆಂದು ಭಾವಿಸಬೇಕು.
ಡಿ) ಮೇಲಿನ ಯಾವುದೂ ಅಲ್ಲ.

93 Indian Evidence Act was drafted by-
A) Lord Macaulay.
B) Sir James F Stephen.
C) Huxley.
D) Sir Henry Summer Maine.

ಭಾರತ ಸಾಕ್ಷ ಅಧಿನಿಯಮವನ್ನು ಬರೆದದ್ದು–
ಎ) ಲಾರ್ಡ್ ಮೆಖಾಲೆ.
ಬಿ) ಸರ್ ಜೇಮ್ಸ್ ಎಫ್ ಸ್ಟೀಫನ್.

ಸಿ) ಹಕ್ಸಲೀ.
ಡಿ) ಸರ್ ಹೆನ್ರಿ ಸಮ್ಮರ್ ಮೈನ್.

94 Any order made under Section 125 of the Code of Criminal Procedure should be cancelled or varied-
A) on proof of change in the circumstance of the person receiving the maintenance awarded.
B) where it appears to the Magistrate that in consequence of any decision of a competent civil court, such order shall be cancelled or varied.
C) on proof of change in the circumstance of the person paying the maintenance.
D) where the person paying the maintenance ceases to be the citizen of India.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 125ರ ಅಡಿಯಲ್ಲಿ ಮಾಡಿದ ಯಾವುದೇ ಆದೇಶವನ್ನು ರದ್ದು ಪಡಿಸಲೇಬೇಕಾದ ಮತ್ತು ವ್ಯತ್ಯಸ್ತ ಮಾಡಲೆಬೇಕಾದ ಸಂದರ್ಭ–
ಎ) ದತ್ತ ಜೀವನಾಂಶವನ್ನು ಸ್ವೀಕರಿಸುವ ವ್ಯಕ್ತಿಯ ಸಂದರ್ಭ ಬದಲಾವಣೆ ಆದ ಬಗ್ಗೆ ಪುರಾವೆ ಕೊಟ್ಟಾಗ.
ಬಿ) ಸಕ್ಷಮ ಸಿವಿಲ್ ನ್ಯಾಯಾಲಯದ ನಿರ್ಣಯದ ಕಾರಣದಿಂದ ಮ್ಯಾಜಿಸ್ಟ್ರೇಟ್ ಅಂತಹ ಆದೇಶವನ್ನು ರದ್ದು ಪಡಿಸಬೇಕು ಅಥವಾ ವ್ಯತ್ಯಸ್ತ ಮಾಡಬೇಕು ಎಂದು ಕಂಡು ಬಂದಾಗ.
ಸಿ) ಜೀವನಾಂಶ ಕೊಡುವ ವ್ಯಕ್ತಿಯ ಸಂದರ್ಭ ಬದಲಾವಣೆ ಆದ ಬಗ್ಗೆ ಪುರಾವೆ ಕೊಟ್ಟಾಗ.
ಡಿ) ಜೀವನಾಂಶ ಕೊಡುವ ವ್ಯಕ್ತಿ ಭಾರತದ ಪ್ರಜೆ ಅಲ್ಲವಾದಾಗ.

95 Section 291-A of the Code of Criminal Procedure empowers the court to use in evidence in trial, the report of identification under the hand of an executive magistrate-
A) only on examining him.
B) only on marking the report in evidence.
C) without examining such Executive Magistrate.
D) only on examining both Executive Magistrate and the I.O.

ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಲಿಖಿತಿಸಿದ ಗುರುತಿನ ವರದಿಯನ್ನು ಸಾಕ್ಷಿ ವಿಚಾರಣೆಯಲ್ಲಿ ಉಪಯೋಗಿಸಲು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 291–ಎ ಅಧಿಕಾರ ಕೊಡುತ್ತದೆ ——
ಎ) ಅವನನ್ನು ಸಾಕ್ಷಿ ವಿಚಾರಣೆ ಮಾಡಿದಾಗ ಮಾತ್ರ.
ಬಿ) ಸಾಕ್ಷ್ಯದಲ್ಲಿ ವರದಿಯನ್ನು ಗುರುತಿಸಿದಾಗ ಮಾತ್ರ.
ಸಿ) ಸದರಿ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ನ್ನು ಸಾಕ್ಷಿ ವಿಚಾರಣೆ ಮಾಡದೆ.
ಡಿ) ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಮತ್ತು ತನಿಖಾಧಿಕಾರಿಯನ್ನು ಸಾಕ್ಷಿ ವಿಚಾರಣೆ ಮಾಡಿದಾಗ ಮಾತ್ರ.

96 In cases of receipt of police report amounting to a complaint under Section 2 of the Code of Criminal Procedure which of the following is correct?
A) The Magistrate cannot proceed further on a report submitted by a police officer where the report discloses commission of a non-cognizable offence.
B) The Magistrate has to direct the police to inform the informant to file a private complaint.

C) The Magistrate has to treat the report as a complaint and the police officer submitting such report as a complainant and proceed further.
D) The Magistrate can proceed to take cognizance on that report treating it as one filed under Section 173 of the Code of Criminal Procedure.

ದಂಡ ಪ್ರಕ್ರಿಯಾ ಸಂಹಿತೆ ಕಲಂ 2ರ ಅಡಿಯಲ್ಲಿ ದೂರು ಎಂದು ಪರಿಗಣಿಸಬಹುದಾದ ಪೋಲೀಸ್ ವರದಿಯನ್ನು ಸ್ವೀಕರಿಸಿದಾಗ ಈ ಕೆಳಗಿನವುಗಳಲ್ಲಿ ಯಾವುದು ಸರಿ?
ಎ) ಪೋಲೀಸ್ ಅಧಿಕಾರಿ ಸಲ್ಲಿಸಿದ ವರದಿಯು ಸಂಜ್ಞೇಯ ಅಪರಾಧವನ್ನು ತಿಳಿಯಪಡಿಸಿದಾಗ ಮ್ಯಾಜಿಸ್ಟ್ರೇಟ್ ಅಂತಹ ವರದಿಯಲ್ಲಿ ಮುಂದುವರೆಯಲು ಆಗುವುದಿಲ್ಲ.
ಬಿ) ಖಾಸಗಿ ಫಿರ್ಯಾದನ್ನು ಸಲ್ಲಿಸಬೇಕೆಂದು ಮಾಹಿತಿದಾರನಿಗೆ ಮಾಹಿತಿ ನೀಡಲು ಮ್ಯಾಜಿಸ್ಟ್ರೇಟ್ ಪೋಲೀಸರಿಗೆ ನಿರ್ದೇಶಿಸಬೇಕು.
ಸಿ) ಮ್ಯಾಜಿಸ್ಟ್ರೇಟ್ ಆ ವರದಿಯನ್ನು ಫಿರ್ಯಾದು ಎಂದು ಪರಿಗಣಿಸಬೇಕು ಮತ್ತು ಆ ವರದಿಯನ್ನು ಸಲ್ಲಿಸಿದ ಪೋಲೀಸ್ ಅಧಿಕಾರಿ ಫಿರ್ಯಾದುದಾರನೆಂದು ತಿಳಿದು ಮುಂದುವರಿಯಬೇಕು.
ಡಿ) ದಂಡ ಪ್ರಕ್ರಿಯಾ ಸಂಹಿತೆಯ ಕಲಂ 173ರಲ್ಲಿ ಸಲ್ಲಿಸಿದ ವರದಿಯೆಂದು ಪರಿಗಣಿಸಿ ಸಂಜ್ಞೆ ತೆಗೆದುಕೊಳ್ಳಲು ಮ್ಯಾಜಿಸ್ಟ್ರೇಟ್ ಮುಂದುವರಿಯಬೇಕು.

97 In an Application under Section 34 of the Arbitration and Conciliation Act, 1996, on which of the following ground, an arbitral award can be set-aside?
A) the arbitration agreement is not valid under the law to which the parties have subjected it.
B) the arbitral award is in conflict with the public policy of India.
C) the subject matter of the dispute is not capable of settlement by arbitration under the law for the time being in force.
D) all the above.

ಮಧ್ಯಸ್ತಿಕೆ ಮತ್ತು ಸಂಧಾನ ಅಧಿನಿಯಮ, 1996, ಕಲಂ 34ರ ಅಡಿಯಲ್ಲಿ ಸಂಧಾನ ಐತೀರ್ಪು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ನಡವಳಿಕೆಗಳಲ್ಲಿ ಐತೀರ್ಪನ್ನು ಕೆಳಕಂಡ ಯಾವ ಕಾರಣಗಳಿಗೆ ರದ್ದುಪಡಿಸಬಹುದು?
ಎ) ಉಭಯ ಪಕ್ಷದಾರರಿಗೆ ಬಂಧನಕಾರಿಯಾಗಿರುವ ಕಾನೂನಿನಡಿಯಲ್ಲಿ ಸದರಿ ಮಧ್ಯಸ್ತಿಕೆ ಒಪ್ಪಂದವು ಊರ್ಜಿತವಾಗಿಲ್ಲ.
ಬಿ) ಪ್ರಶ್ನಿತ ಸಂಧಾನದ ಐತೀರ್ಪು ಭಾರತೀಯ ಸಾರ್ವಜನಿಕ ಧೋರಣೆಯನ್ನು ಸಂಘರ್ಷಿಸುತ್ತದೆ.
ಸಿ) ಸಮಕಾಲೀನ ಕಾನೂನಿಡಿಯಲ್ಲಿ ವಿವಾದಿತ ವಿಷಯವು ಮಧ್ಯಸ್ಥಿಕೆಯ ಮೂಲಕ ಇತ್ಯರ್ಥಗೊಳಿಸಲು ಅಸಮರ್ಥವಾಗಿರುವುದಾಗಿದೆ.
ಡಿ) ಮೇಲ್ಕಂಡ ಎಲ್ಲವೂ.

98 A decree for possession of an immovable property is obtained by plaintiff in the year 2012. During execution proceedings, a third party files an application under Order XXI Rules 97 and 98 of the Code of Civil Procedure contending that he purchased the property in the year 2014 from the defendant. In such case, which of the following contention of the parties is sustainable?
A) applicant is not bound by the decree as he is not a party to it.
B) if application is not entertained, applicant is driven to file a separate suit for declaration of title which leads to multiplicity of the proceedings.

C) in view of Section 47 of the Code of Civil Procedure, the claim made in application by the purchaser can be entertained by the executing Court.
D) since the alleged purchase of the property by the applicant is during pendency of execution, the application is not maintainable.

ವಾದಿಯು ಸ್ಥಿರ ಸ್ವತ್ತಿನ ಸ್ವಾಧೀನಕ್ಕಾಗಿ ಸಲ್ಲಿಸಿರುವ ದಾವೆಯಲ್ಲಿ 2012ರಲ್ಲಿ ಡಿಕ್ರಿಯನ್ನು ಪಡೆದುಕೊಂಡಿದ್ದಾನೆ. ಅಮಲ್ಜಾರಿ ವ್ಯವಹರಣೆಯಲ್ಲಿ 3ನೇ ಪಕ್ಷಕಾರನು ವಿವಾದಿತ ಸ್ವತ್ತನ್ನು ತಾನು 2014ರಲ್ಲಿ ಖರೀದಿಸಿರುವುದಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 21 ನಿಯಮ 97 ಮತ್ತು 98ರಡಿಯಲ್ಲಿ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಪಕ್ಷಕಾರರ ಈ ಕೆಳಕಂಡ ಯಾವ ವಾದ ಊರ್ಜಿತ?
ಎ) ಡಿಕ್ರಿಯಲ್ಲಿ ಅರ್ಜಿದಾರನು ಪಕ್ಷಗಾರನಿಲ್ಲದೆ ಇರುವುದರಿಂದ ಆತನಿಗೆ ಡಿಕ್ರಿ ಬಂಧನಕಾರಿಯಲ್ಲ.
ಬಿ) ಅರ್ಜಿಯನ್ನು ಸ್ವೀಕರಿಸದಿದ್ದರೆ ಅರ್ಜಿದಾರ ಸ್ವತ್ತಿನ ಸ್ವಾಮ್ಯದ ಘೋಷಣೆಗಾಗಿ ಪ್ರತ್ಯೇಕ ದಾವೆ ಸಲ್ಲಿಸಬೇಕಾಗುವುದರಿಂದ ಅಂತಹ ಕ್ರಮವು ಪ್ರಕರಣಗಳ ಬಾಹುಳ್ಯಕ್ಕೆ ಕಾರಣವಾಗುತ್ತದೆ.
ಸಿ) ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 47ರ ಕಾರಣದಿಂದ ಅಮಲ್ಜಾರಿ ನ್ಯಾಯಾಲಯವು ಖರೀದಿದಾರರ ಅಂತಹ ಅರ್ಜಿಯನ್ನು ಸ್ವೀಕರಿಸಲು ಶಕ್ಯವಿದೆ.
ಡಿ) ಅರ್ಜಿದಾರನು ಸ್ವತ್ತನ್ನು ನ್ಯಾಯಲಯದಲ್ಲಿ ಅಮಲ್ಜಾರಿ ಪ್ರಕರಣವು ಚಾಲನೆಯಲ್ಲಿರುವಾಗ ಖರೀದಿ ಮಾಡಿದ್ದರಿಂದ ಅರ್ಜಿ ಊರ್ಜಿತಯೋಗ್ಯವಲ್ಲ.

99 When the question is whether a person has committed dowry death of a woman, which of the following is the correct statement under Section 113B of the Indian Evidence Act?
A) If it is shown that the accused had subjected such woman to cruelty, Court may presume that he has caused dowry death.
B) If it is shown that the accused subjected such woman to cruelty for the demand for dowry, Court may presume that he has caused dowry death.
C) If it is shown that some years prior to death, accused had subjected her to cruelty, the Court shall presume that he has caused dowry death.
D) the Court shall raise such presumption if it is shown that soon before her death the accused subjected her to cruelty in connection with demand for dowry.

ಒಬ್ಬ ವ್ಯಕ್ತಿ ಮಹಿಳೆಯ ವರದಕ್ಷಿಣೆಯ ಸಾವನ್ನು ಮಾಡಿದ್ದಾನೆಯೇ ಎಂಬ ಪ್ರಶ್ನೆ ಬಂದಾಗ ಭಾರತ ಸಾಕ್ಷ್ಯ ಅಧಿನಿಯಮದ ಕಲಂ 113ಬಿ ಅಡಿಯಲ್ಲಿ ಈ ಕೆಳಗಿನವುಗಳ ಪೈಕಿ ಯಾವುದು ಸರಿಯಾದ ಹೇಳಿಕೆ?
ಎ) ಆರೋಪಿಯು ಆ ಮಹಿಳೆಯನ್ನು ಕ್ರೌರ್ಯಕ್ಕೆ ಒಳಪಡಿಸಿದ್ದಾನೆ ಎಂದು ತೋರಿಸಿದರೆ, ಆತ ವರದಕ್ಷಿಣೆ ಸಾವು ಮಾಡಿದ್ದಾನೆ ಎಂದು ಭಾವಿಸಬಹುದು.
ಬಿ) ಆರೋಪಿಯು ಆ ಮಹಿಳೆಯನ್ನು ವರದಕ್ಷಿಣೆ ಬೇಡಿಕೆಗಾಗಿ ಕ್ರೌರ್ಯಕ್ಕೆ ಒಳಪಡಿಸಿದ್ದಾನೆ ಎಂದು ತೋರಿಸಿದರೆ, ಆತ ವರದಕ್ಷಿಣೆ ಸಾವು ಮಾಡಿದ್ದಾನೆ ಎಂದು ಭಾವಿಸಬಹುದು.
ಸಿ) ಮರಣಕ್ಕೆ ಕೆಲವು ವರ್ಷಗಳ ಹಿಂದೆ ಆರೋಪಿಯು ಆಕೆಯನ್ನು ಕ್ರೌರ್ಯಕ್ಕೆ ಒಳಪಡಿಸಿದ್ದನು ಎಂದು ತೋರಿಸಿದರೆ ಆತ ವರದಕ್ಷಿಣೆ ಸಾವು ಮಾಡಿದ್ದಾನೆ ಎಂದು ಭಾವಿಸಲೇಬೇಕು.
ಡಿ) ಮಹಿಳೆಯ ಮರಣದ ನಿಕಟ ಪೂರ್ವದಲ್ಲಿ ಆರೋಪಿ ವರದಕ್ಷಿಣೆ ಬೇಡಿಕೆಗಾಗಿ ಆಕೆಯನ್ನು ಕ್ರೌರ್ಯಕ್ಕೆ ಒಳಪಡಿಸಿದ್ದನು ಎಂದು ತೋರಿಸಿದರೆ ನ್ಯಾಯಾಲಯವು ಆ ರೀತಿ ಪೂರ್ವಭಾವನೆ ಮಾಡಲೇಬೇಕು.

100 In a suit against Government or public officer where leave is granted under Section 80(2) of the Code of Civil Procedure to institute the suit dispensing service of notice as required under Section 80(1) of the Code of Civil Procedure-

A) an exparte interim order against such defendant can be granted if the matter is urgent.

B) an exparte interim order against such defendant can be granted if plaintiff makes out a prima-facie case.

C) an exparte interim order against such defendant can be granted if suit is only for permanent injunction.

D) no exparte interim order against such defendant can be granted without issuing the notice of application.

ಸರ್ಕಾರ ಅಥವಾ ಸಾರ್ವಜನಿಕ ಸೇವಕನ ವಿರುದ್ಧ ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 80(1)ರ ಅಡಿಯಲ್ಲಿ ನೀಡಬೇಕಾಗಿರುವ ದಾವಾ ಪೂರ್ವ ನೋಟೀಸಿಗೆ ವಿನಾಯಿತಿ ಪಡೆದು ಸಲ್ಲಿಸಿರುವ ಪ್ರಕರಣದಲ್ಲಿ-

ಎ) ಪ್ರಕರಣದಲ್ಲಿ ಜರೂರು ಇದ್ದಲ್ಲಿ ಪ್ರತಿವಾದಿಯ ವಿರುದ್ಧ ಏಕಪಕ್ಷೀಯ ತಾತ್ಕಲಿಕ ಆದೇಶವನ್ನು ಮಾಡಬಹುದು.

ಬಿ) ವಾದಿಯು ಮೇಲ್ನೋಟದ ಪ್ರಕರಣ ಇದೆ ಎಂದು ಮನವರಿಕೆ ಮಾಡಿದರೆ ಪ್ರತಿವಾದಿಯ ವಿರುದ್ಧ ಏಕಪಕ್ಷೀಯ ತಾತ್ಕಲಿಕ ಆದೇಶವನ್ನು ಮಾಡಬಹುದು.

ಸಿ) ದಾವೆಯು ನಿರ್ಭಂದಕಾಜ್ಞೆ ಪರಿಹಾರಕ್ಕಾಗಿ ಮಾತ್ರ ಆಗಿದ್ದರೆ ಅಂತಹ ಪ್ರಕರಣದಲ್ಲಿ ಪ್ರತಿವಾದಿ ವಿರುದ್ಧ ಏಕಪಕ್ಷೀಯ ಆದೇಶವನ್ನು ನೀಡಬಹುದು.

ಡಿ) ಅರ್ಜಿಯ ನೋಟೀಸನ್ನು ನೀಡದೆ ಪ್ರತಿವಾದಿಯ ವಿರುದ್ಧ ಯಾವುದೇ ಏಕಪಕ್ಷೀಯ ತಾತ್ಕಲಿಕ ಆದೇಶವನ್ನು ಮಾಡಲಾಗದು.